ಕೊರವಂಜಿ



ಸೆಪ್ಟೆಂಬರ್ ೧೯೪೨

★

ಸಂಪಾದಕರು:
ಶ್ರೀ. ರಾ. ಶಿ.

ಸಲಹೆಗಾರರು:
ಶ್ರೀ. ನಾ. ಕಸ್ತೂ

ಚಿತ್ರಕಾರರು:
ಶ್ರೀ ಆರ್. ಕೆ ಲಕ್ಷ್ಮಣ್

★

ಬಿಡಿಪತ್ರಿಕೆ
ಎರಡಾಣೆ.

ತಿಳಿನಗೆಯ ಮಾಸ ಪ.ತ್ರಿ.

ಕೊರವಂಜಿ

ಕೊರವಂಜಿಯು ಪ್ರತಿ ತಿಂಗಳ ಪಾಡ್ಯವೂ ಹೊರಬೀಳುವುದು.

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನು ದ್ವೇಷಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಸಂಪಾದಕೀಯ ಪತ್ರ ವ್ಯವಹಾರಗಳನ್ನು ಸಂಪಾದಕರು. ನಂ. ೧, ವೆಂಕಟ ರಂಗೈಯ್ಯಂಗಾರ್ ರಸ್ತೆ, ಮಲ್ಲೇಶ್ವರ, ಬೆಂಗಳೂರಿನಲ್ಲಿ ನಡೆಸಬೇಕು.


ವ್ಯವಸ್ಥಾಪಕರಲ್ಲಿ ಮಿಕ್ಕ ವಿಷಯಗಳನ್ನು ಪ್ರಸ್ತಾಪಿಸಬೇಕು.

ವ್ಯವಸ್ಥಾಪಕರು,

೨೮-ಎ, ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. 2-0-0 **ಬಿಡಿ ಪ್ರತಿ 0-2-0**

ವಿಷಯಾನುಕ್ರಮಣಿಕೆ



ಸಂಪುಟ ೧] ಕೊರವಂಜಿ, ಸಪ್ಟೆಂಬರ್ ೧೯೪೨ [ಸಂಚಿಕೆ ೬

ಕುಹ ಕಿಡಿಗಳು

ಈಜಿಪ್ಟಿನ ಸಂಗ್ರಾಮವು ತಾತ್ಕಾಲಿಕವಾಗಿ ತಟಸ್ಥವಾಗಿದೆಯೆಂದು ಸುದ್ದಿ.

—ಅಂದಮೇಲೆ ರೋಮೆಲ್ಲರೂ, ಚರ್ಚಿಲಿಕ್ಕರೂ ಸಂಗ್ರಾಮ ಸಾಹಿತ್ಯವನ್ನು ಬರೆಯುತ್ತಿರುವರೇ ?

* * *

ಸಾಮೂಹಿಕ ಸತ್ಯಾಗ್ರಹವು ಈ ತಿಂಗಳಿನಲ್ಲಿ ನಡೆಯಬಹುದಂತೆ.

—ಏನೇ ಆಗಲಿ, ಮಾತನಾಡುವುದಕ್ಕೆ ಸಂಗ್ರಾಮವಲ್ಲದೆ ಬೇರೆ ವಿಷಯ ಸಿಕ್ಕಿತಲ್ಲ !

* * *

ನಮ್ಮೂರಿನಲ್ಲಿ ಅಕ್ಕಿ ಬೇಳೆ ಬೆಲೆ ಹೆಚ್ಚಾಗಿದೆಯಂತೆ.

—ಆದರೇನು ವಿಳ್ಳೇದೆಲೆ ಅಡಿಕೆಯಲಿ ಹೊಟ್ಟೆತುಂಬಿಕೊಳ್ಳುವ ನಮ್ಮ ಸ್ನೇಹಿತರಿಗೆ ಇವರಿಂದೇನು ನಷ್ಟ ?

* * *

ನಮ್ಮ ಮಿತ್ರ ಸೈನ್ಯಾಧಿಕಾರಿಗಳ ನೀತಿ ವಾಕ್ಯ: "ಬರ್ಮಾ ಸಂಸ್ಥಾಪನಾರ್ಥಾಯ ಸಂಗ್ರಾಮಾಮಿ ಯುಗೇ ಯುಗೇ."

* *

ಬೆಂಗಳೂರಿನಲ್ಲಿ ದೀಪಗಳ ನಿರೋಧ ಜಾರಿಪಡಿಸಲ್ಪಟ್ಟಿದೆಯಂತೆ. ಇನ್ನು ಮೋಟಾರಿನವರಿಗೆ ಕಷ್ಟ: ಕತ್ತಲು ಕಾಣಿಸುವುದಿಲ್ಲ ಎಂಬ ನೆಪವೂ ಇನ್ನು ಮೇಲೆ ಇಲ್ಲ ಅವರಿಗೆ ಅಪಘಾತಗಳನ್ನು ಮಾಡುವಾಗ—

ಹಿಟ್ಲರನ ಗುಪ್ತಾಯುಧವನ್ನು ಕಂಡುಹಿಡಿದವರಿಗೆ ಲಕ್ಷರೂಪಾಯಿ ಬಹುಮಾನ ಕೊಡುವರಂತೆ--ಜರ್ಮನಿಯಲ್ಲಿ--

* * *

ಸರ್ ಸಿಕಂದರ್ ಹಯಾತ್‌ಖಾನರು ಕಾಂಗ್ರೆಸಿಗೆ ಸೇರುವರೆಂದು ವದಂತಿ.

—ಆವರೆ ರಾಜಾಜಿಯವರೂ ಸರ್ ಸಿಕಂದರರೂ ಪರಸ್ಪರವಾಗಿ ತಲೆಯುಡುಪನ್ನು ಬದಲಾಯಿಸುತ್ತಾರೆಂಬ ಸುದ್ದಿಯು ಸುಳ್ಳು

* * *

ಸಂಗೀತವನ್ನು ಹೇಳುತ್ತಾ ಹಾಲು ಕರೆದರೆ ಹಸುವು ಹೆಚ್ಚಾಗಿ ಹಾಲು ಕೊಡುವುದಂತೆ.

—ಇರಬೇಕು. ಮೊನ್ನೆ ನಮ್ಮ ಮನೆಗೆ ತಂದ ಹಾಲನ್ನು ನೋಡಿದರೆ, ಕವಾಡಿಗನು ಸಾವೇರಿಯಲ್ಲಿ ಹಾಡುತ್ತಿದ್ದನೆಂದು ಅನುಮಾನ ಬಂತು-ಹಸುವೂ ನೀರು ನೀರಾಗಿ ಬಿಟ್ಟಿದ್ದಿರಬೇಕು.

* * *

ಆಗಸ್ಟ್ ಏಳನೆಯ ತಾರೀಖಿನಿಂದ ಅಸಹಕಾರ ಚಳುವಳಿ ಹಿರಿದಾಗಿ ನಡೆಯಬಹುದಂತೆ.

—ಕನ್ನಡ ಪತ್ರಿಕೆಗಳಿಗೇನೂ ಗಾಬರಿಯಿಲ್ಲ. ಅವು ಹುಟ್ಟಿದಂದಿನಿಂದ ಓದುಗರ ಅಸಹಕಾರವನ್ನೂ ನೋಡೇ ಇವೆಯಲ್ಲ-ಆದರೂ ಬದುಕಿವೆಯಲ್ಲ !

* * *

ಬೃಂದಾವನಕ್ಕೆ ಹೋದ ಗೌಡ ಒಬ್ಬ ಹೀಗಂದನಂತೆ. "ಅಯ್ಯೋ ! ಅಯ್ಯೋ! ಅಲ್ಲಿ ಕೆರೆ ನೀರಿಗೂ ಬಣ್ಣ ಬುಡ್ತಾರೆ, ಹೂವಿಗೆಲ್ಲಾ ರಂಗು ಹಚ್ತಾರೆ."

* * *

ಹೆಬ್ಬಿಗುಬ್ಬಾಲೆಯಲ್ಲಿ ಹಲವಾರು ಜನರು ನೂರು ವರ್ಷಗಳತನಕ ಬದುಕುತ್ತಾರಂತೆ.

—ಇವತ್ತು ಮಾಡುವ ಕೆಲಸವನ್ನು ನಾಳೆಗೆ ಮುಂದುಹಾಕುವ ದುರಭ್ಯಾಸವೇ ಇದಕ್ಕೆ ಕಾರಣವಂತೆ.

* * *

ಐದು ಜನರಲ್ಲೊಬ್ಬರು ಜಟಕಾದಲ್ಲಿ ಸಂಚಾರಮಾಡುತ್ತಾರೆಂದು ಅಂಕೆ ಅಂಶ ತತ್ವಗಳ ಹೇಳಿಕೆ.

—ಮಿಕ್ಕ ನಾಲ್ವರು ಜಟಕಾ ಅಪಘಾತದಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಡುತ್ತಿರುತ್ತಾರೆ.

ಹುರಿಗಾಳು

ಹಾಸ್ಟಲುಗಳಲ್ಲಿ ಹುಡುಗರ ಸ್ನಾನ ಸಂಗೀತವನ್ನು ನಿಲ್ಲಿಸುವುದು ಹೇಗೆ, ಎಂದು ವಾರ್ಡನೊಬ್ಬರು ನಮಗೆ ಬರೆದಿರುವರು. ಸ್ನಾನ ಮಾಡುವಾಗ ಹಾಡಲೇಬೇಕೆಂದು ಒಂದು ಆಜ್ಞೆ ಹೊರಡಿಸಿದರೆ ತಾನಾಗಿಯೇ ನಿಂತುಹೋಗುತ್ತೆ.

○

ಸೊಳ್ಳೆಗಳನ್ನು ತಿಂದು ಕಾಟ ತಪ್ಪಿಸುವ ಮೀನುಗಳಿವೆಯಂತೆ ಆದರೆ ಅವುಗಳನ್ನು ಪಕ್ಕದಲ್ಲಿ ಮಲಗಿಸಿಕೊಂಡು ನಿದ್ದೆ ಹೋಗುವುದಕ್ಕಿಂತ ಸೊಳ್ಳೇ ಕಾಟವೇ ವಾಸಿ.

○

ನಿಮಿಷಕ್ಕೆ ೧೭೫೦ ಸಿಗರೇಟುಗಳನ್ನು ತಯಾರಿಸುವ ಯಂತ್ರವೊಂದನ್ನು ಈಗ ಸಾಧಾರಣ ಎಲ್ಲಾ ಸಿಗರೇಟು ಕಾರ್ಖಾನೆಗಳಲ್ಲೂ ಉಪಯೋಗಿಸುತ್ತಿರುವರಂತೆ. ಈಗರ್ಥವಾಯಿತು ನನಗೆ. ಶೀನು ಯಾಕೆ ಬೇಗ ಬೇಗ ಒಂದಾದಮೇಲೊಂದನ್ನು ಸೇದಿ ಮುಗಿಸುತ್ತಿದಾನೆ, ಅಂತ.

○

ಲಾರಿಗಳಲ್ಲೆಲ್ಲಾ ಪ್ರಥಮ ಚಿಕಿತ್ಸಾ ಸಲಕರಣೆಗಳನ್ನು ಇರಿಸಿರಬೇಕೆಂದು ಆಜ್ಞೆಯಾಗಿದೆ ಅಷ್ಟೆ. ಹೀಗೆಯೇ ಪಾದಚಾರಿಗಳೆಲ್ಲರೂ ಬೊಂಬು ಹುರಿಗಳನ್ನು ಹೊತ್ತು ತಿರುಗಬೇಕೆಂಬ ಆಜ್ಞೆಯೂ ಇಷ್ಟರಲ್ಲೇ ಬರಬಹುದೋ ಏನೋ ?



ನ್ಯಾಯಾಧೀಶ-(ಹಂಗಾಮಿ ಕೆಲಸ ನೋಡುತ್ತಿರುವವ) ಖೈದಿಯನ್ನು ಕುರಿತು ನೀನು ಎಲ್ಲಿ ವಾಸಮಾಡುತ್ತಿಯೆ ?

ಖೈದಿ — ನಿಮ್ಮಂತೆಯೇ, ಸ್ವಾಮಿ. ಊರೂರು ಸುತ್ತಾಡುತ್ತಿರುತ್ತೇನೆ.

○

ನಮ್ಮೂರಿನಲ್ಲಿ ಗೃಹ ಕೈಗಾರಿಕಾ ಪ್ರದರ್ಶನವೊಂದು ನಡೆಯಲಿದೆ. ನಾನು ನಮ್ಮ ತೀರ್ಥರೂಪರ ಗೃಹ ಕೈಗಾರಿಕೋದ್ಯಮದ ಫಲವಾದ ಬಾಸುಂಡೆಗಳನ್ನು ಪ್ರದರ್ಶಿಸಬೇಕೆಂದಿರುವೆನು.

○

"ಮೆರವಣಿಗೆ ಸಮಾರಾಧನೆ ಸಂತರ್ಪಣೆ, ಕಾಶಿಯಾತ್ರೆ, ಉರುಟಣಿಗೆ ಇವೆಲ್ಲವೂ ವಿವಾಹಕ್ಕೆ ಆಗ[illegible]' ಎಂದು ಒಬ್ಬರು ಸುಧಾರಕರು ಉಪನ್ಯಾಸಕೊಟ್ಟರು. ನನ್ನ ಸ್ನೇಹಿತರೊಬ್ಬರು ಇವರಿಗಿಂತ ಹೆಚ್ಚು ಸುಧಾರಣೆಯನ್ನು ಬಯ

ಸುತ್ತಾರೆ. ಅವರ ಅಭಿಪ್ರಾಯದಲ್ಲಿ ವಧು ಕೂಡ ಬೇಕಿಲ್ಲ, ವರದಕ್ಷಿಣೆ ಒಂದೇ ಸಾಕು !

○

" ನಿಮ್ಮ ಸ್ಟೇಷನಿನಿಂದ ಮೀಡಿಯಂ ವೇವಿನಲ್ಲೂ ಷಾರ್ಟ್‌ವೇವಿನಲ್ಲೂ ಒಂದೇ ಕಾರ್ಯಕ್ರಮವನ್ನು ಏಕೆ ಪ್ರಸಾರ ಮಾಡುತ್ತಿದ್ದೀರಿ ? '' ಎಂದು ಕೇಳಿದ್ದಕ್ಕೆ "ಎರಡು ಕಿವಿಗಳಿಗೂ ಒಂದೇ ಸಮನೆ ಕೇಳಿ ಬರುವುದಕ್ಕಾಗಿ'' ಎಂಬ ಉತ್ತರ ಬಂತು !

○

" ಸಾಮಾನ್ಯವಾಗಿ ಎಲ್ಲಾ ನಟರೂ ತಮ್ಮ ಸಂತೋಷಕ್ಕಾಗಿಯೇ ಅಭಿನಯಿಸುತ್ತಾರೆ" ಎಂದು ಒಬ್ಬರು ಕಲಾಕೋವಿದರರು ಹೇಳಿದರು. ಆಗಬಹುದು. ಆದರೆ ಪ್ರೇಕ್ಷಕವೃಂದವನ್ನೂ ಏಕೆ ಆ ಸಂತೋಷದಲ್ಲಿ ಭಾಗಿಗಳಾಗಿ ಮಾಡುವುದಿಲ್ಲ-ಎಂಬುದೇ ಪ್ರಶ್ನೆ !

○

ಬರೀ ಹೊಟ್ಟೆ ಮೇಲೆ ಒಂದು ಮೈಲಿಯಾದರೂ ಬೆಳಗಿನ ಹೊತ್ತು ನಡೆದರೆ ಒಳ್ಳೇದೆಂದು ಒಬ್ಬರು ಡಾಕ್ಟರು ಹೇಳಿದ್ದಾರೆ. ಆದರೆ ಅಷ್ಟೊಂದು ಬರೀ ಹೊಟ್ಟೆಗಳನ್ನು ಸಾಲಾಗಿ ನಮಗೋಸ್ಕರ ಯಾರು ಜೋಡಿಸಿಡುತ್ತಾರೆ ?

○

ಸಂಗೀತಗಾರರೊಬ್ಬರ ತಲೆಯ ಮೇಲೆ ಅಕಸ್ಮಾತ್ತಾಗಿ ಗೋಡೆ ಉರುಳಿತಂತೆ. "ಅಕಸ್ಮಾತ್" ಎಂಬುದನ್ನು ನಾವೊಪ್ಪುವುದಿಲ್ಲ. ಗೋಡೆಗಳಿಗೂ ಕಿವಿ ಇರುವ ಕಾಲ ಇದು.

ತಾನು ಬರೆದು ಪ್ರಕಟಿಸಿದ ಒಂದು ಪುಸ್ತಕದಿಂದ ಬಂದ ಹಣವನ್ನು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಉಪಯೋಗಿಸಲು ಒಬ್ಬರು ಕಾಲೇಜು ವಿದ್ಯಾರ್ಥಿಗಳು ನಿರ್ಧರಿಸಿರುವರಂತೆ. ದೊಡ್ಡವರೂ ಹೀಗೆ ಮಾಡಿದರೆ ಎಷ್ಟೋ ಅನುಕೂಲ ಅಲ್ಲವೆ ?

○

"ಕಾಫಿಯಲ್ಲಿ ಹಲ್ಲಿ ಬಿದ್ದಿದೆಯಲ್ರೀ ? ಏನ್ರಿ ಇದರರ್ಥ ?" ಅಂತ ಹೊಟೇಲ್ ಮಾಣಿಯಹತ್ತಿರ ರೇಗಿದರೆ ಅವನು ''ನಾವು ಹೊಟೇಲಿಟ್ಟಿದೇವೆ,ಅಷ್ಟೆ! ನಮಗೆ ಜ್ಯೋತಿಷ್ಯ ಬರುವುದಿಲ್ಲ ಸ್ವಾಮಿ" ಅಂತ ಅನ್ನಬಹುದೆ ?

○

''ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಭಾಷಣಗಳಿಂದೇನೂ ಪ್ರಯೋಜನವಿಲ್ಲ" ಎಂದು ನಮ್ಮ ದೇಶದ ರಾಜಕೀಯ ನಾಯಕರೊಬ್ಬರು ಹೇಳಿದರಂತೆ. ಅವರ ಆತ್ಮಹತ್ಯೆಯನ್ನೇ ದುರು ನೋಡುತ್ತಾ ಆಗಲೇ ಹತ್ತಾರು ಕವಿಗಳು ಚರಮಶ್ಲೋಕಗಳನ್ನು ಬರೆಯುತ್ತಿರುವರಂತೆ !

○

ಸರ್ಕಸ್ ಬೋನಿನಿಂದ ತಪ್ಪಿಸಿಕೊಂಡ ಸಿಂಹವೊಂದು ಸುಂಕದ ಕಟ್ಟೆಮನೆಯೊಳಕ್ಕೆ ನುಗ್ಗಿ ತೆಪ್ಪಗೆ ಕುಳಿತುಕೊಂಡಿತ್ತಂತೆ ! ಇದೇನೂ ಹೊಸದಲ್ಲ........ನಾವೂ ಅನೇಕಸಾರಿ ಸುಂಕದ ಕಟ್ಟೆಗೆ ಸಿಂಹದಂತೆ ಗರ್ಜಿಸುತ್ತಾ ಹೋಗಿ, ತೆಪ್ಪಗಾಗಿದ್ದೇವೆ.

'ವನದೇವತೆ'

ಎಲ್ಲಿ ನೋಡಿದರಲ್ಲಿ ಹಚ್ಚನೆ ಹಸುರು, ಅಲ್ಲಲ್ಲಿ ದೊಡ್ಡ ದೊಡ್ಡ ಮರಗಳು- ವಿಧ ವಿಧ ಬಣ್ಣದ ಹೂಗಿಡಗಳು- ಸ್ವೇಚ್ಛಾಹಾರಿಯಾಗಿ ಬೆಳೆದ ಲತೆಗಳು ಷಹರಿನಲ್ಲಿ ಬೇಸರ ಬಂದಾಗ, ಕೆಲಸದಿಂದ ವಿರಾಮ ಹೊಂದಿದಾಗ ನಾನು ಊರಾಚೆ ತೋಟಗಳಿರುವೆಡೆಗಳಿಗೆ ಹೋಗಿ ಪ್ರಕೃತಿ ಸೊಬಗನ್ನು ಸವಿಯುತ್ತಾ ಹಗಲುಗನಸನ್ನು ಬೆಳೆಸುತ್ತಾ ಕಾಲಕಳೆಯುತ್ತಿದ್ದೆ. ಹೀಗೆ ಕಣ್ತಂಪು ಮಾಡುತ್ತಿದ್ದ ಪ್ರಾಕೃತಿಕ ಸೊಬಗೆಲ್ಲವೂ ದೊಡ್ಡ ದೊಡ್ಡ ಜಾಹೀರಾತು ಬೋರ್ಡುಗಳಿಂದ ಹಾಳಾಗಿಹೋಗಿವೆ.

ಮೊದಲಬಾರಿ ಹೋದಾಗ ವಿವಿಧ ಹಕ್ಕಿಗಳೆಲ್ಲವೂ ಕೂತಲ್ಲಿಯೇ ನನಗೆ ಸ್ವಾಗತವಿತ್ತವು. ಮರಗಳೆಲ್ಲಾ ಕೊಂಬೆ ಜೋಡಿಸಿ ನಮಸ್ತೆ ಎಂದುವು. ಹಸುರು ಹುಲ್ಲು ಕೂಡ ತನುವಾಗಿ ಹಾಸಿಗೆ ಹಾಸಿದುವು. ಹಾಗೆಯೇ ಮಲಗಿದೆ ಹಗಲಗನಸು ಕಾಣಲು. ಸ್ವಲ್ಪ ಹೊತ್ತಿನಲ್ಲೇ ಹಸುರುಡುಪನ್ನು ಧರಿಸಿದ ಯುವತಿಯೋರ್ವಳು ' ಚಿಮ್ಮುತ ನಿ●ಯುನು ವನದಲಿ ಬಂದಳು." ತಲೆಗೆಲ್ಲಾ ಲತೆಗಳು-ಅಲಂಕಾರ ಜಡೆಯಲ್ಲೆಲ್ಲಾ ಕಣ್ಸೆಳೆವ ಹೂಗಳು-ನವಮಧುರ ನಗೆ. ಮುಖ್ಯ ಮನಸೆಳೆಯುವಂತಿದ್ದಳು. ನಾನು ಕೇಳಿದೆ 'ದೇವಿ ನೀನಾರು ಎಂದು' ಆಕೆಯಂದಳು 'ನಾನು ಈ ವನದ ಸತಿ' ಎಂದು ಅವಳ ನಿಷ್ಕಲ್ಮಷ ಸೊಗಸಿಗೆ ಸೆರೆಯಾಗಿಹೋದೆ. ಹಗಲುಗನಸೆಚ್ಚೆತ್ತಾಗ ಊರಿಗೆ ಹಿಂತಿರುಗಿದೆ.

* * *

ಎರಡನೆಯ ಬಾರಿ ಬನದಹತ್ತಿರ ಹೋದಾಗ ಅಲ್ಲೊಂದು ದೊಡ್ಡ ಜಾಹೀರಾತಿನ ಬೋರ್ಡು. ಬೋರ್ಡಿನ ಮೇಲೆ ಒಂದು ಪಡುವಲ ಕಡಲಾಚೆಯ ಹುಡುಗಿಯ ಬೊಂಬೆ. ಅರೆ ಬೆತ್ತಲೆ ಉಡುಪು ಪಾಮೂಲೀವ್ ಸಾಬೂನನ್ನು ಕೈಯಲ್ಲಿ ಹಿಡಿದು ಕೊಳದ ಹತ್ತಿರ ಇರುವ ಚಿತ್ರ. ಅಯ್ಯೋ ದೇವರೇ ? ಈ ಬೋರ್ಡಿನಿಂದ ದೃಶ್ಯವೇ ಅದೃಶ್ಯವಾಯಿತಲ್ಲ ಎಂದಂದುಕೊಂಡು ಹಾಗೆಯೇ ಮಲಗಿ ಹಗಲಗನಸು ಕಂಡೆ.

ಬೋರ್ಡಿನ ಕೆಳಗೇ ಬನದ ಸತಿಯು ಇಳಿಮುಖಳಾಗಿ ತಲೆಬಾಗಿ ಕಂಬನಿಗರೆಯುತ್ತ ಕುಳಿತಿದ್ದಳು. 'ಏಕಮ್ಮಾ ತಾಯಿ, ಏಕಿಂತು ಚಿಂತಿಸುವೆ' ಎಂದೆ. "ಅಯ್ಯೊ! ನಾನು ರಾಣಿಯಂತೆ ವಿಹರಿಸುತ್ತಿದ್ದ ಈ ವನದಲ್ಲಿ. ಇವಳೊಬ್ಬಳನ್ನು ತಂದು ನಿಲ್ಲಿಸಿರುವರು, ಇನ್ನು ನನ್ನ ಕುಣಿತವೆಲ್ಲಿ, ನನ್ನ ಸ್ವಾತಂತ್ರ್ಯವೆಲ್ಲಿ. ನಾನಾವ ವನಕ್ಕೆ ದೇವತೆಯಾಗಲಿ' ಆ ವೇಳೆಗೆ ನನಗೂ ಎಚ್ಚರಿಕೆಯಾಗಿ ಊರಿಗೆ ಬಂದೆ.

* * *

ಮೂರನೆಯ ಬಾರಿ ವನದ ಬಳಿಗೆ ಹೋದಾಗ ಆ ಬೋರ್ಡು ಮಾಯವಾಗಿತ್ತು. ಅದನ್ನು ನೆಟ್ಟ ಸ್ಥಳದಲ್ಲಿ ಕೂಡ ವಿಷ್ಣು●ಕ್ರಾಂತಿಯ ಬಳ್ಳಿಯು ಹಬ್ಬಿಕೊಂಡು ಅಲ್ಲಲ್ಲಿ

ನೀಲಿ ಹೂಗಳನ್ನು ಹಸುರಿನ ಮೇಲೆ ಹಾಸಿದ್ದುವು. ಸಮೀಪದಲ್ಲಿಯೇ ಒಂದು ತೊರೆಯು ಹರಿದು ಬರುತ್ತಿತ್ತು. ದಡದ ಕಲ್ಲುಗಳೊಡನೆ ಕಿರಿಯಲೆಗಳೆಲ್ಲಾ ಆಡುತ್ತಾ ಕಾಲುಂಗರ ರವಗೈಯುತ್ತಿದ್ದುವು. ಪ್ರಕೃತಿಯ ಪೂರ್ವ ಸೊಬಗಿಗೆ ಮನಸೋತು ನಾನು ಹಾಗೆಯೇ ಮನಗಿದೆ-ಹಗಲಗನಸು ಕಂಡೆ.

ತೊರೆಯ ಬಳಿಯಲ್ಲೇ ಬನದಸತಿಯು ಚಂದ್ರಕಿರಣಗಳಂತೆ ಸುಳಿದಾಡುತ್ತಿದ್ದಳು 'ಏನಮ್ಮಾ ತಾಯಿ. ನೀನು ಮೊದಲಂತೆಯೇ ಸುಖವಾಗಿರುವೆಯಾ, ಪಾಮಾಲಿವ್ ಕನ್ನೆಯೂ ಅಳಿದಳೇ ಎಂದೆ. 'ಆಹಾ' ಎಂದು ಕಿಲಕಿಲನೆ ನಗುತ್ತಾ ಕಣ್ಣಂಚ ನೋಟದಿಂದ ಹೇಳಿದಳು.

ಆದರೆ ಚಕಿತನಾಗಿ ಎಚ್ಚೆತ್ತೆ. ಬನದ ಸತಿಯೂ ಪಾಮಾಲಿವ್ ಸಾಬೂನನ್ನು ಕೈಯಲ್ಲಿ ಹಿಡಿದಿದ್ದಳು.



ಗೌಡ— ಏನ್ರಪ್ಪಾ, ಈಜಾಗ್ದಲ್ಲೇ ಎಣ್ಣೆ ಸಿಕ್ತದೆ ಅಂತ ನಿಮಗೆ ಹ್ಯಾಗೆ ಗೊತ್ತು?–
ಎಣ್ಣೆ ಸಿಗೊ ಕಡೇನೇ ಈ ಪಂಪು ಹಾಕ್ತೀರಲ್ಲ!

ಸಂಬಂಧ

ಮೇಸ್ತ್ರಿ ರಂಗಪ್ಪನು ಶುದ್ಧ ಹುಚ್ಚನೆಂದು ಊರವರೆಲ್ಲರೂ ಹೇಳುತ್ತಿದ್ದರು. ಒಂದು ಮನೆಕಟ್ಟಿಸೋದು ಗೃಹಪ್ರವೇಶ ಆಗುವತ್ತಿಗೆ ಅದನ್ನು ಮಾರುವುದು. ಮಾರಿದ ಬೆಲೆ ನೋಡಿದರೆ ಆತನಿಗೇನೂ ಲಾಭ ಬಂದಂತೆ ಕಾಣಿಸಲಿಲ್ಲ. ಹೀಗೆ ಆ ಷಹರಿನ ಅಂಚಿನಲ್ಲಿದ್ದ ಜಮೀನನ್ನೆಲ್ಲಾ ಮನೆ ಸೈಟುಗಳಾಗಿ ಮಾಡಿ ಮನೆಗಳನ್ನು ಕಟ್ಟಿಸಿದ. ಕೊನೆಯ ಪಕ್ಷ ಇನ್ನೂರು ಮನೆಗಳನ್ನು ಕಟ್ಟಿಸಿದ್ದಿರಬೇಕು. ಆತನು ಸಾಯುವ ಕಾಲಕ್ಕೆ ಒಂದೊಂದು ಮನೆಯೂ ಒಂದೊಂದು ರೀತಿಯಾಗಿದ್ದು, ಕೇವಲ ಇಬ್ಬರಿದ್ದರೂ ಅನುಕೂಲ, ಎಂಟು ಹತ್ತು ಜನರಾದರೂ ಸೌಕರ್ಯವಾಗಿದ್ದಿತು. ಮನೆಯನ್ನು ಮಾರುವಾಗ ಒಂದು ಮಾತನ್ನು ಆತನು ನಗು ನಗುತ್ತ ಹೇಳುತ್ತಿದ್ದನು. ನೋಡಿ ಈ ಅಂಗಡೀ ಬೀದಿಗಲಾಟೆ ಇದ್ದರೆ ಮನೆಗಳಲ್ಲಿರುವುದಕ್ಕೆ ಆಗುವುದಿಲ್ಲ. ಆದಕ್ಕಾಗಿ ಈ ಮನೆಯಲ್ಲಿ ಅಂಗಡಿ ಇಡುವುದಿಲ್ಲ ಎಂದು ಕರಾರು ಮಾಡಿಸಿಕೊಂಡೇ ನಾನು ಮನೆಯನ್ನು ನಿಮಗೆ ಮಾರುತ್ತೇನೆ ಎಂದು. ಕೊಂಡುಕೊಳ್ಳುವವರಿಗೂ ಇದು ನ್ಯಾಯವಾಗಿಯೇ ತೋರುತ್ತಿತ್ತು. ಅವರೂ ಇದಕ್ಕೆ ಒಪ್ಪಿಕೊಂಡೇ ಮನೆಯನ್ನು ಕೊಂಡುಕೊಳ್ಳುತ್ತಿದ್ದರು.

ಮೇಸ್ತ್ರಿ ರಂಗಪ್ಪನಿಗೆ ಅರವತ್ತು ವರ್ಷವಾದಾಗ ಆತನು ಪರಂಧಾಮ ವನ್ನೈದಿದನು. ಇದೇನಿದು ? ಪರಂಧಾಮ ಮೇಸ್ತ್ರಿಗೆ ? ಎನ್ನಬಹುದು ನೀವು. ಆದರೆ ಆತನ ವೈದ್ಯನ ಹೆಸರು ಪರಂಧಾಮಾಚಾರ್ ಎಂದು. ಮೇಸ್ತ್ರಿಗೆ ಒಬ್ಬನೇ ಮಗ. ಮಗನಿಗೆ ಒಟ್ಟು ಸಿಕ್ಕ ಅಪ್ಪನ ಆಸ್ತಿ ಎಂದರೆ ನೂರು ರೂಪಾಯಿ. ಒಂದು ಮನೆ.

ಇನ್ನೂರು ಮನೆಗಳವರೂ ಏನಾದರೂ ಸಾಮಾನು ತರಬೇಕಾದರೆ ಮೂರು ಮೈಲಿ ಷಹರಿನೊಳಕ್ಕೆ ಹೋಗಬೇಕಾಗಿತ್ತು. ಆದರೆ ದಿನಾಲೂ ಉಪಯೋಗಿಸುವ ಹಲ್ಲುಪುಡಿ, ಸೋಪು, ಬಳಪ, ಪೆನ್ಸಿಲ್ಲು, ಆಯುಷ್ಕರ್ಮಾಯುಧಗಳು, ಇತ್ಯಾದಿಯೆಲ್ಲವೂ, ಷಹರಿಗೆ ಹೋಗುವ ಮೊದಲೇ, ನಾಗಪ್ಪನ ಅಂಗಡಿಯಲ್ಲಿ ಸಿಕ್ಕುತ್ತಿತ್ತು. ಗುಂಡು ಸೂಜಿಯಿಂದ, ಹಾಲು ಮೊಸರಿನ ತನಕ ಕಾಲು ಚೀಲದಿಂದ ಗಾಂಧಿಟೋಪಿ ವರೆಗೆ ಚಿಲ್ಲರೆ ಸಾಮಾನುಗಳೆಲ್ಲವೂ ನಾಗಪ್ಪನ ಅಂಗಡಿಯಲ್ಲಿ ಸಿಕ್ಕುತ್ತಿತ್ತು. ಈತನ ವ್ಯಾಪಾರವೂ ಚೆನ್ನಾಗಿಯೇ ನಡೆಯುತ್ತಿತ್ತು.

ನಾಗಪ್ಪನ ಅಂಗಡಿಯೊಂದೇ ಈ ಇನ್ನೂರು ಮನೆಗಳಿಗೂ ಸರಬರಾಜು ಮಾಡುತ್ತಿತ್ತು. ಅಲ್ಲದೆ ಇನ್ನು ಯಾರೂ ಹತ್ತಿರದಲ್ಲಿ ಬೇರೆಮನೆಯಲ್ಲಿ ಅಂಗಡಿ ಇಡಲು ಸಾಧ್ಯವಿರಲಿಲ್ಲ.

ಇದೇನಿದು. ಮೇಸ್ತ್ರಿ ರಂಗಪ್ಪ ಮನೆಕಟ್ಟಿಸಿ ಮಾರಿಮರಣವಾದ. ನಾಗಪ್ಪ ಅಂಗಡಿ ಇಟ್ಟು ವ್ಯಾಪಾರ ಮಾಡಿದ ಏನು ಸಂಬಂಧ ಕತೆಯಲ್ಲಿ ಎನ್ನಬಹುದು ನೀವು.

ನಾಗಪ್ಪ ಮೇಸ್ತ್ರಿ ರಂಗಪ್ಪನ ಏಕಮಾತ್ರ ಮಗ.

ಪಲಾಯನ-ಒಂದು ನಾಟಕ

★

" ಬಾ ! ಶೀನು ! "
"ಬಂದೆ.
ಅಂತು, ಇವತ್ತೊಂದು ದಿನ....
ನೀನು ಅಷ್ಟು ಬಲವಂತ ಮಾಡಿದರೆ....
ಸರಿ ! ಇವತ್ತು....ಹಾಯಾಗಿ ಕೊಂಚ
ಹೊತ್ತು
ಅದೇನು ?
ಮನೆಯಲ್ಲಿ....
ಮಗುವಿಗೆ ಹುಟ್ಟಿದ ಹಬ್ಬವೇ ?
ಮಕ್ಕಳು ಯಾರೂ ಮನೆಯಲ್ಲೇ ಇಲ್ಲ !
ಮತ್ತೆ....ಏನು ವಿಶೇಷ ?
ಅವರೆಲ್ಲರೂ ಯಾರ ಮನೆಗೋ....
ಊಟಕ್ಕೆ ?
ಹುಂ !
ಹಾಗಾದರೆ ನನಗೂ ನಿನಗೂ ?
ಹೋಟಲಿಂದ....
ಅಷ್ಟೇನೆ ?
ಇನ್ನೇನು ಬೇಕು. ಒಟ್ಟಿಗೆ ಊಟ
ಮಾಡೋಣ !
ಎಷ್ಟು ದಿನವಾಯಿತು ! ಏನು ಕಥೆ !
ಹಿಂದೆ, ಹಾಸ್ಟಲಲ್ಲಿದ್ದಾಗಲೇ
ಹತ್ತು ವರ್ಷವಾಯಿತು !
ಬಾ ! ಏಳು !
ಎದ್ದೆ....
ಸಾಕೋ ?
ಹಾಕು.
ಹಪ್ಪಳ
ಒಂದು ಚೂರು.
ತುಪ್ಪ ?
ಅನ್ನದಲ್ಲೇ ಕಲಿಸಿ ಬಿಟ್ಟಿದ್ದಾನೆ,
ಮಹಾರಾಯ !
ಮೊಸರು ?
ಗಂಟಲು ಕೆರೆತ....ಬೇಡ !
ಅಬ್ಬ ! ಅಂತು. ಇದ್ದದ್ದರಲ್ಲಿ ನೀನು.
ಸುಖವಾಗಿತ್ತು, ಬಿಡು.
ಎಲೆ ಅಡಿಕೆ ?
ಓಹೋ !
ಅವರಿಗೆ ಗೊತ್ತೇನು ? ನಾನು
ಬಂದದ್ದು....
ತಲೆ ಒಡೆದು ಬಿಡುತ್ತಾಳೆ !
ಹಾಗಾದರೆ ನಿನ್ನ ಪಾಡೂನೂ....
ನನ್ನ ಹಾಗೆಯೇ !
ಅಯ್ಯೋ.
ಯಾಕೆ ?
ಬಂದರು !
ಎಲ್ಲಿ ?
ಅಕೊ ?
ಹಿತ್ತಲು ಬಾಗಿಲಿನಿಂದ....
ಓಡುತ್ತೇನೆ !
ಬೇಗ....
ಛತ್ರಿ ಕೊಡು !....

ನಾ. ಕ.

ಹರಿಗೋಲಿನಲ್ಲಿ ಹೊಡೆದಾಟ

ಹೇಮಾವತಿ ಹೊಳೆ ತುಂಬಿ ಹರಿಯುತ್ತಿತ್ತು. ಈ ವರ್ಷದ ಹಾಗೆ ಪ್ರವಾಹ ಹತ್ತುವರ್ಷದಿಂದ ಕಂಡೇ ಇಲ್ಲವೆಂದು ಹರಿಗೋಲು ಕಂಟ್ರಾಕ್ಟರ್ ಜಾಂಬವಂತಗೌಡ ದಡದಲ್ಲೇ ಹೇಳಿದ್ದ. ನಾವು ಹೊಳೆದಾಟಿದ ಪ್ರದೇಶಕ್ಕೆ ಕೊಂಚ ಮೇಲೆ ನದಿಗೆ ಅಡ್ಡವಾಗಿ ದೊಡ್ಡ ದೊಡ್ಡ ಬಂಡೆಗಳು ಇದ್ದಿದ್ದರಿಂದ ಕತ್ತನ್ನು ಬಗ್ಗಿಸಿ ಕಡಿವಾಣವನ್ನು ಕೊಡವಿ ಮುನ್ನುಗ್ಗುವ ಬಿಳಿ ಕುದುರೆಗಳ ಸಾಲಂತೆ ಹೊಳೆಯಲ್ಲಿ ನೀರು ಭರದಿಂದ ಸಾಗುತ್ತಿತ್ತು. ಅಲೆಗಳ ಹೊಡೆತದಿಂದ ಹರಿಗೋಲಿನೊಳಕ್ಕೂ ಆಗಾಗ ನೀರು ಛಳ್ ಅಂತ ಬೀಳುತ್ತಿತ್ತು. ಆಳುಗಳಿಬ್ಬರೂ ಒಂದೇ ಕಡೆ ನಿಂತುಕೊಂಡು ತಮ್ಮ ಮಲೇರಿಯಾ ಮೈಗಳನ್ನು ಬಗ್ಗಿಸಿ ಹುಟ್ಟುಹಾಕುತ್ತಿದ್ದುದರಿಂದ ಹರಿಗೋಲು ಒಂದೇ ಕಡೆಗೆ ಆಗಾಗ ಬಾಗುತ್ತಿತ್ತು. ನನಗೆ ನೀರು ಅಂದರೆ ಕೊಂಚ ಭಯವೇ. ಮಳೆ ಗಾಳಿ, ಸಿಡಿಲು, ಮಿಂಚು ಅಂದರೆ ಮೊದಲಿನಿಂದಲೂ ನಡುಕವೇ. ಏನೋ ಈಗ ದೊಡ್ಡವನಾಗಿ, ಮಕ್ಕಳೊಂದಿಗನಾಗಿರುವುದರಿಂದ ಅಷ್ಟು ಪ್ರಕಟಿಸುವುದಿಲ್ಲವಾದರೂ "ಒಳಗಿನೊಳಗಡೆ ಕುಳಿತು" ನನ್ನ ಆತ್ಮ ಅವಲಕ್ಕಿ ಕುಟ್ಟುತ್ತಾ ಇರುತ್ತದೆ. ಸಾಲದ್ದಕ್ಕೆ ಹರಿಗೋಲಿನ ತಳದಲ್ಲೂ ಪಕ್ಕದಲ್ಲೂ ತೂತುಗಳು ಬೇರೆ. ಒಳಕ್ಕೆ ಚಿಮ್ಮುತ್ತಿದ್ದ ನೀರನ್ನು ಒಡಕು ಮಡಿಕೆಯಿಂದ ಪ್ರಯಾಣಿಕನೊಬ್ಬನು ಬಾಚಿ ತೆಗೆದು ಹೊಳೆಯ ನೀರನ್ನು ಹೊಳೆಗೆ ಚೆಲ್ಲುತ್ತಿದ್ದ.

ನನಗೆ ಈಜುವುದಕ್ಕೂ ಬರದು. ಬಂದಿದ್ದರೂ ಇಂತಹ ಪ್ರವಾಹದಲ್ಲಿ ಈಜಿ ದಡ ಸೇರಲು ಎಮ್ಮೆಗೂ ಸಾಧ್ಯವಿಲ್ಲ ಎಂದು ಆ ಊರಿನವರೇ ಒಬ್ಬರು ಹೇಳಿದ್ದರು. ಅವರು ಹರಿಗೋಲಿನಲ್ಲೇ ಇದ್ದರು, ಒಂದು ಭಾರಿ ಟ್ರಂಕು ಸಹಿತವಾಗಿ. ಹರಿಗೋಲು ಕೆಲವು ವೇಳೆ ಸರ್ರನೆ ಸುತ್ತುತ್ತಾ ಒಂದು ಕಡೆಗೆ ವಾಲಿದಾಗಲೆಲ್ಲಾ ನನ್ನ ಸ್ನೇಹಿತರು, "ಹೆದರಬೇಡ, ವೆಂಕಣ್ಣ! ಇಲ್ಲಿ ಕೆಳಗಡೆ. ಒಂದು ಬಂಡೆ ಇದೆ; ಅದರ ಮೇಲೆ ಸುಳಿಯುತ್ತಾ ಇದೆ ನೀರು." ಎಂದು ಸಮಾಧಾನ ಹೇಳಿ ನನ್ನ ಭೀತಿಯನ್ನು ಕೆರಳಿಸುತ್ತಿದ್ದರು. "ಇಲ್ಲಿ ಆಳ ಎಷ್ಟು ಇರಬಹುದು" ಎಂದು ನನ್ನ ಜೊತೆಯವರು ಪ್ರಶ್ನೆ ಕೇಳಿದ ಕೂಡಲೇ ಅಲೆಯೊಂದು ಮತ್ತೊಂದಕ್ಕೆ ಡಿಕ್ಕಿ ಹೊಡೆದು ನೀರು ಚಿಮ್ಮಿ ಅವರ ಬಾಯೊಳಕ್ಕೆ ಸರಿಯಾಗಿ ನುಗ್ಗಿತು. ಆಗ ಹರಿಗೋಲಲ್ಲಿದ್ದ ಹದಿನಾರಾಳುಗಳೂ, ನನ್ನನ್ನುಳಿದು, ಒಟ್ಟಿಗೆ ನಕ್ಕರು. ಹುಟ್ಟು ಹಾಕುವವರಿಗೆ ಕೋಪ ಬಂತು. "ಸುಮ್ಮನೆ ಕುಂತುಕೊಳ್ಳಿ. ಅಳ್ಳಾಡಬೇಡಿ" ಅಂತ ಅವರು ಬೇರೆ ಎಚ್ಚರಿಸಿದರು.

ನಾವು ಹೊರಟ ಸ್ಥಳದಿಂದ ಎರಡು ಫರ್ಲಾಂಗ್ ಕೆಳಗೆ ನಡು ಹೊಳೆಗೆ ಹರಿಗೋಲು ಬಂತು. ನನಗೆ ತಲೆ ಎತ್ತಿ ಭೋರ್ಗರೆವ ಆ ಪ್ರವಾಹವನ್ನು

ವೀಕ್ಷಿಸುವುದೂ ಕೂಡ ಬೇಕಿರಲಿಲ್ಲ. ನನ್ನ ಸುತ್ತ ಕುಳಿತಿದ್ದ ಕರ್ಣಾಟಕ ಬಾಂಧವರನ್ನೇ ತಲೆಬಗ್ಗಿಸಿಕೊಂಡು ಪರಿಶೀಲಿಸುತ್ತಾ ಕುಳಿತಿದ್ದೆ. ಆಗ ನನ್ನ ಪಕ್ಕದಲ್ಲಿದ್ದ ಗೌಡರೊಬ್ಬರು "ಇಲ್ಲೇ....ಈ ತಾವೇ ಆ ಶಾನುಭೋಗರು ಹರಿಗೋಲನ್ನು ಮುಗುಚಿಹಾಕಿದ್ದು" ಅಂದರು. ಅವರೆದುರಿಗಿದ್ದ ನೀರು ಸೇರುತ್ತಿದ್ದ ಗೌಡರು "ಹುಂ, ಆ ದೊಡ್ಡ ಸುಳಿ ತಾವು" ಎಂದು ಹೇಳಿ ಮಂಡಿವೂರಿ ನಿಂತು ಕೈ ತೋರಿಸಿದರು. ನನಗೆ ದಿಗಿಲು ಹೆಚ್ಚಿತು. "ಅಯ್ಯಾ? ನೀನು ಮಾತನಾಡದೆ ನೀರು ತೆಗೆದು ಹಾಕು" ಅಂದೆ ವಿನಯಪೂರ್ವಕವಾಗಿ. ಅದಕ್ಕವನು "ಬಿಡಿ, ಬುದ್ಧಿ! ಯಾಕೆ ಹೆದರಿ ಸಾಯುತ್ತೀರಿ! ಸೊಂಟತನಕ ನೀರು ನಿಂತಿದ್ದರೂ ಕೂಡ ಪ್ರಾಣಕ್ಕೇನೂ ಭಯವಿಲ್ಲ. ಅಂತಹ ಶ್ಯಾನುಭೋಗರೇ ಹೋದವರ್ಷ ತಾವು ಮುಳುಗಲಿಲ್ಲ. ಇನ್ನು ನಿಮಗೇನು, ಬುದ್ಧಿ" ಅಂದ.

ನನ್ನ ಮುಖದಲ್ಲಿ ಬಿಳುಪೇರಿತು. ನನ್ನ ಭಯವನ್ನು ಕಂಡು ಒಬ್ಬಿಬ್ಬರಿಗೆ ಕರುಣೆ ಅಂಕುರಿಸಿತು. "ಲೋ! ಹಾಗೆಲ್ಲಾನೂ ಇಂತಹ ಪ್ರವಾಹದಲ್ಲಿ ನಡುಹೊಳೆಯಲ್ಲಿ ಹೇಳಿಬೇರದು. ಯಾವ ಗಳಿಗೆಯಲ್ಲಿ ಯಾರ ನಾಲಿಗೆಯಲ್ಲಿ ಗ್ರಹಚಾರ ಕೂತಿರುತ್ತದೋ!" ಅಂದರು. ಮತ್ತೊಬ್ಬರು, "ಎಲ್ಲಿ ಹೋದರೂ ಶ್ಯಾನುಭೋಗರನ್ನೇ ಬೈಯುತ್ತೀರಿ ನೀವು ಗೌಡಮಕ್ಕಳು!" ಎಂದು ಕೊಂಚ ಕೋಪದಲ್ಲೇ ಮಾತನಾಡಿದರು. ಸರಿ. ಅದೇ ನೆಪ. ಹತ್ತಾರು ನಾಲಿಗೆಗಳು ಎದ್ದು ಕುಣಿದುವು. "ನೀವೇನು ಅವರ ನಂಟರಾ?" "ಒಬ್ಬರು ಶ್ಯಾನುಭಾಗರನ್ನ ಹಾಗೆಂದರೆ ಬೇರೆಯವರಿಗೆ ಯಾಕೆ ಕೋಪ?" "ಪಾಪ! ಆ ಶ್ಯಾನುಭಾಗರು ನೀರಿಗೆ ಹಾರಿದ್ದು ಚೇಳಿಗೆ ಹೆದರಿಕೊಂಡಲ್ಲವೇನು?" "ಹರಿಗೋಲಿನಲ್ಲಿ ಚೇಳು ಕಂಡರೆ ಎಂಥವರಿಗೂ ಭಯವೇ?" "ಚೇಳೋ ಹಾವೋ ಸುಮ್ಮನಿರಿ ಅಪ್ಪಾ" "ಸುಮ್ಮನಿರುವುದಕ್ಕಾಗುತ್ತದೆಯೋ ಬುದ್ಧಿ, ಕಾಲಿನ ಮೇಲೆ ಚೇಳು ಹರಿದರೆ "ಅಂತ ಪ್ರಾರಂಭ. ಆಗ ನನ್ನ ಕಾಲಿನ ಮೇಲೆ ಏನೋ ಹರಿಯಿತು. ಕಿರ್‌್ರ ಅಂತ ಕಿರಿಚಿಕೊಂಡು ಎದ್ದೆ. ನನ್ನ ಬೆನ್ನಮೇಲೆ ಹರಿಗೋಲು ನಡೆಸುವವನು ಹುಟ್ಟಿನಿಂದಲೇ ಒಂದು ಬಾರಿಸಿದ. ನಾನು ಥಟಕ್ಕನೆ ಕುಳಿತೆ."

ಆಗ ನನ್ನ ಬೆನ್ನ ಹಿಂದೆ ಯಾರೋ ನಕ್ಕ ಹಾಗೆ ಕೇಳಿಸಿತು. ಮೆಲ್ಲಗೆ ಎರಡು ಮೃದುವಾದ ಕೈಗಳು ನನ್ನ ಭುಜದ ಮೇಲೆ ಬಿದ್ದುವು. ತಿರುಗಿನೋಡಿದೆ. "ಕಥೆ ಬರೆಯುವುದಕ್ಕೂ ಒಂದು ರೀತಿ ಇಲ್ಲವೆ. ಯಾರು ಯಾರ ಕೈಲೋ ಪೆಟ್ಟುತಿಂದೆ ಅಂತ ಯಾಕೆ ಬರೆಯುತ್ತೀರಿ. ಆಮೇಲೆ ಅದನ್ನೋಡಿ ಯಾರಾದರೂ ನಿಜ ಅಂತ ತಿಳಿದರೆ........? ಅಂದಳು ನನ್ನಾಕೆ.

ದೂರ್ಥನೆ?

[ಮೋಟ ಮುದುಕನಾಗುತ್ತಿರುವ ಜಟ್ಟಿ. ಹಿಂದೊಮ್ಮೆ ಒಬ್ಬ ಯುವಕನನ್ನು ಸೋಲಿಸಿದ್ದ. ಅದೇ ಯುವಕ, ಗರುವಾಳು, ತಯಾರಿ ತೆಗೆದುಕೊಂಡು ಮೋಟನ ಮೇಲೆ ಕುಸ್ತಿಗೆ ಹೋಗುವಾಗ ಹಿಂದಿನ ಪೌರುಷ ನೆನೆದು ಹೇಳುವನು ಮೋಟ]

(ಶ್ರೀ ಯುವರ ಕ್ಷಮೆ ಬೇಡಿ)

ಗರುವಾಳು, ಬಾ, ಒಳಗೆ ಮುಸುಕಿದೀ ಮೊಬ್ಬಿನಲಿ,
  ಕೈಹಿಡಿದು ನಿಲಿಸೆನ್ನನು.
ಗರಡಿ ಕತ್ತಲೆಯುಭುವಿ, ಕೈಮೂರ ಹೂಂಕರಿಸಿ
  ಕೈಹಿಡಿದು ನಿಲಿಸೆನ್ನನು.
ಹೇಡಿ ನಿನ್ನಡಿಯಿಡುತ ಬಲುದೂರ ಮೋಟನನು
  ನೋಡಿದೊಡನೆಯೆ-ಹಾಕು ಹಿಂದೊಂದು ಹೆಜ್ಜೆ.
ಮುಂದೆ ನಿಂತಿರದಾದೆ; ನನ್ನ ಬೇಡದೆ ಹೋದೆ,
  ಕೈ ಮುಗಿದು ಸಡಲಿಸೆನುತ.
ಒಂದೆ ಹಾರನು ಹಾರಿ ಪಟ್ಟು ಹಿಡಿದನು—ಇನ್ನು
  ಕೈಬಿಡಿಸಿ ಬದುಕು ನೀನು.
ಹೊರಗೆ ಬಣ್ಣಕೆ ಬೆವತು, ಭಯವರಿತು, ತಬ್ಬಿದುದ
  ಮರೆತಾಯ್ತೆ? ಮರೆಯದಿರು ಹಿಂದಿನದೆಲ್ಲ.
ಇಷ್ಟುದಿನ ಸಹಿಸಿರುವೆ ಮೂರ್ಖತೆಯ; ಮುಂದೆಯೂ
  ಕೈಸವರಿ ತೊಡೆ ತಟ್ಟಿ ನಿಲ್ಲಿಸುವೆಯಾ?
ಭ್ರಷ್ಟ ದವಡೆಯ ಮುರಿದು ಕೊಟ್ಟ ಏಟನು ಮರೆದು
  ಕೊಳಗಳನು ಹಾಕುತಿಹೆಯಾ?
ಮಳಲಾಗ ಹರಿಯನೇ ಹಿಂದೊಮ್ಮೆ ನಾನೊದೆದು
  ಆ ನಡುವ ಕಳೆಕೊಂಡೆಲುಬು ಗೂಡ, ನಗುತ?

—ಸ ಧು.

ನರ ನೆರೆ

ಉಸ್ ಬೀಸಿ ಬ್ರಿಡ್ಜಿನಲಿ ಕಲ್‌ಮನುಜ ನಿಂತಂತೆ
ನಿಂತೆ ನಾನೊಂದು ದಿನ. ಗುಂತಕಲ್ಲಿನ ಗಾಡಿ,
ಪುಣೆಗಾಡಿ, ಮಹಿಶೂರ ಗಾಡಿಯೊ ಬಂದಿತ್ತು.
ಮೇಲೇರಿ ಕೆಳಗಿಳಿದು ಬಡಬಡನೆ ದಬಧಬಿಪ
ಗುಂಪಿಗರ ನೋಡಿದೆನು. ಟ್ರಂಕು ಹಾಸಿಗೆ ಸಾಲು,
ಊಟದೆಲೆಗಳ ಗಂಟು, ಮಡಿಬುಟ್ಟಿ ಹೋಲ್ಡಾಲು,
ಹರಕು ಸೀರೆಯ ಮೂಟೆ, ಕುಕ್ಕೆಗಳು ಚೀಲಗಳು,
ಬೀಡಿಂದ ಬೀಡಿಂಗೆ ಬದಲಿಸುವ ಮೊರೆ ಹೊರೆಯು,
ಹಂತವನು ಹತ್ತುತ್ತ ಹಂತವನು ಇಳಿಯುತ್ತ
ಜಂಗಮದ ಸಂತೆ! ಕಿರುಗಾಳಿ ಕರಿಯಾಗಿ
ಬೀಸಿದುದು. ತೇಲಿದುವು ವಾಯು ಮಂಡಲದಲ್ಲಿ
ಭುಗ ಭುಗನೆ ಹೊರ ಹೊರಟ ಹೊಗೆ ಮೋಡ ರಾಶಿ!
ಕೆಳ ನೆಲದಿ ಹಾಸಿದ್ದ ಕಂಬಿಸಾಲಿನ ಮೇಲೆ
ಗುಡುಗುಗಳ ಸಣಕಿಸುತ ಚುಕ ಚುಕಾರವಗೈದು
ಕಬ್ಬಿಣಾಸುರತಂಡ ಡಬ್ಬಿಗಳ ದಬ್ಬಿದುವು! ನೋಡಿದೆನು ಬ್ರಿಡ್ಜಿನಲಿ
ಆಧುನಿಕ ನಾರಿಯರ ನಾಗರಿಕ ಜೀವನಂ!
ಕರಿ ಮೈಗೆ ಮುಖ ಧೂಳಿ ತುಟಿ ಬಣ್ಣ ತುಸುಲಂಗ!
ಥಳಕಿನಲಿ ಜಿಳಕನ್ನು ಕಳಕೊಂಡ ಪಾಳ್ಬದುಕು!
ತಾಯಿಯನು ಕೈ ಹಿಡಿದು ಹಂತವಿಳಿಸುವ ಕುವರ,
ನಾಯಿಯನು ಮೇಲೆತ್ತಿ ಮುದ್ದಿಡುವ ಕುವರಿ,
ಅತ್ತೆಯಿಂ ಪಾರಾದ ಸೊಸೆಯೊಬ್ಬಳಾನಂದ,
ಮಗು ತಾಯಿ ತಮ್ಮದಿರ ಅಕ್ಕರೆಯ ಸ್ನೇಹ!
ನಗು ಕೋಪ ಕಂಬನಿ ಕಾತುರತೆ ಮೋಹ!
ಕಳವಳವು ಕಿರಿಕಿರಿಯು ಸಾಲ ಸೋಲದ ದಾಹ!
ಜನಮುಖದಿ ಕಂಡೆನಾ!
ಓವರ್ ಬ್ರಿಡ್ಜಲಿ ನಿಂತು ಕನಿಕರ ಕುತೂಹಲದಿ
ನೋಡಿದೆನು ನರನೆರೆಯ! ಅರೆಗಳಿಗೆ ಮನುಜಹೊಳೆ!
ಮತ್ತೆಲ್ಲ ಬರಿ ಬರಿದು! ಶುನಕನೊಬ್ಬನು ಮಾತ್ರ
ಕಿವಿಯನ್ನು ಕೊಡಹುತ್ತ ಕಾಲಸಂದಿಲಿ ನಿಂತು
ಹೋಗಿಬಾ ಎಂದೆನುತ ಬಾಲವಾಡಿಸುತಿತ್ತು.

— ನಾ. ಕ.

ಮಹಾನುಭಾವರುಗಳೊಡನೆ ಅತಿರಸ ನಿಮಿಷಗಳು

ಕೆಲವು ವರ್ಷಗಳ ಹಿಂದೆ ನಮ್ಮ ಕನ್ನಡ ಸೇವಕರೊಬ್ಬರು ಜಗತ್ತನ್ನೆ ಎಚ್ಚರಿಸಿ ಜ್ಞಾನ ಪ್ರಚಾರ ಮಾಡುವ ಸಲುವಾಗಿ ಕೆಲವೊಂದು ಉಪಾನ್ಯಾಸಗಳನ್ನು ಏರ್ಪಡಿಸಿದ್ದರು. ಅದನ್ನು ಹೊಸತಿನಲ್ಲಿ ಅನುಭವಿಸಲೋಸುಗ ಜನರಾದರೂ ತಂಡೋಪತಂಡವಾಗಿ ನೆರೆದಿದ್ದರು. ಅದರಲ್ಲೂ ಹರಿಜನ, ಮಹಾಜನ ನಾರೀಜನರಿಂದ ಸಭಾಂಗಣವು ಕಿಕ್ಕಿರಿದಿತ್ತು. ವಿಷಯವೋ 'ಜೀವ ವಿಚಾರ' ಜೀವದ ವಿಷಯವಾಗಿ ಜಗತ್ತಿಗಿರುವ ಅಜ್ಞಾನ ಪರಿಹರಿಸಲೋಸುಗ ನಡೆಯುವ ಉಪಾನ್ಯಾಸವನ್ನು ಕೇಳಲು ಯಾರಿಗೆ ಆತುರವಿಲ್ಲ? ಆ ಸೆಕೆಯಲ್ಲಿ ಆ ಬೆವರಿನ ಮಳೆಯಲ್ಲಿ, ಆಳೆತ್ತರವಾಗಿ ನಿಂತ ಉಪಾನ್ಯಾಸಕರ ಮೋರೆಯನ್ನೇ ಇಣಿಕಿ ನೋಡಿಯೇ ಅವರೆಲ್ಲರ ಕತ್ತು ದಣಿದಿತ್ತು. ಉಪನ್ಯಾಸಕರು ಬಲ್ಲಿದರಾದ ಪಂಡಿತರು. ಅಂತೇನೆ ಗಂಭೀರ ಮೃದುತನದಿಂದ ಮಾತನ್ನು ಬಿಡಿಸಿ ಬಿಡಿಸಿ ಹೇಳತೊಡಗಿದರು. ವಿಷಯ ಯಾಕೆ ಹರಿಯಿತು. ಯಾಕೆ ಹೇಳುತ್ತಿದ್ದೇನೆ. ಎಂದು ತಮಗೆ ಸಮನಾಗಿ ತಿಳಿಸುವಂತೆ ಮಾತನಾಡುತ್ತ ತಲ್ಲೀನರಾಗುವಲ್ಲಿ-ಸಮಯ ಸರಿಯಿತು. ಸುಮ್ಮನಿರಲಾರದೆ ಹಲವು ಮಕ್ಕಳ ಜೀವ ಹಾರಿತು. ತಾಯಂದಿರ ಗಮನ 'ಜೀವ'ದಿಂದ ಪಾಕಶಾಲೆಗೆ ಹರಿಯಿತು. ಅರಸಿಕರೆಲ್ಲರು ತೊಲಗಿ ಸರಸಿಕರಾದ, ಕೇವಲ ಜ್ಞಾನ ಪಿಪಾಸೆಯುಳ್ಳವರು ಮಾತ್ರ ಅಲ್ಲಿ ಉಳಿದರು.

ತಾಸು ಅರ್ಧವಾಯಿತು, ಮುಕ್ಕಾಲಾಯಿತು, ಒಂದು ಸಮಾಪಿಸಿತು. ನಿತ್ಯದ ಉಪನ್ಯಾಸ ಮುಗಿಯುವ ವೇಳೆಗೆ ನಮ್ಮ ಜೀವ ವೈಜ್ಞಾನಿಕರು "ಈಗ ನಾನು ವಿಷಯ ಪ್ರಾರಂಭಿಸುತ್ತೇನೆ" ಅಂದರು.

ನನ್ನ ಜೀವವೂ ಹಾರಿ ನಾನೂ ಹೊರಕ್ಕೆ ಬಂದೆ. ಮರುದಿನ ಬೆಳಗ್ಗೆಯೇ ಅವರ ಉಪನ್ಯಾಸ ಮುಂದುವರಿಯುತ್ತಿರಬಹುದೆಂದು ಊಹಿಸಿಕೊಳ್ಳಲು ಓಡಿದೆ ಆಗ ಅದು ಮುಗಿದೇ ಹೋಗಿತ್ತು. ಅದಕ್ಕೂ ಪೂರ್ವದಲ್ಲಿ ಎಂದರೆ ತೊಡಗಿದ ಮೂರು ತಾಸಿನ ತನಕ ಮಾತ್ರ ಉಪನ್ಯಾಸ ಸರಿಯೆಂದು ಕೊನೆಗೊಂಡಿತ್ತಂತೆ

ಉಪನ್ಯಾಸ ಪೂರ್ತಿಯಾಗುವ ತನಕ ಅಲ್ಲಿ ಜೀವ ಉಳಿಸಿ ನಿಂತವರೆಂದರೆ ಸ್ವತಃ ಅವರು, ಅಧ್ಯಕ್ಷರು, ವಂದನಾರ್ಪಣಾಕಾರರು! ಆ ಶುಭಗಳಿಗೆಯು ಇತರ ದುರ್ದೈವಿಗಳಿಗಿಲ್ಲದೆ. ಹೋಯಿತು.

೨

ನಮ್ಮೊಬ್ಬರು ಗೆಳೆಯರು- ಮಹಾನುಭಾವರು. ಅವರಿಗೆ ಹಗಲು ರಾತ್ರಿಗಳಲ್ಲಿ ಅಂತರವಿಲ್ಲ. ಅವರ ಮಧ್ಯಾಹ್ನದ ಊಟ ರಾತ್ರಿಗೆ, ರಾತ್ರಿಯಊಟ ಬೆಳಗಿನ ಜಾವಕ್ಕೆ; ರಾತ್ರಿಯನಿದ್ರೆಹಗಲಿಲ್ಲ. ಪ್ರತಿಭಾಶಾಲಿಗಳವರು.ಕೆಲವರ ಪ್ರತಿಭೆ ಅವರೆಳೆಯುವ ನಂದಾದೀಪದ ಸಿಗರೇಟಿನ ಹೊಗೆಯಂತೆ ಸ್ವಚ್ಛಂದವಾಗಿ ಸುರುಳಿಯಾಗಿ ಹರಿಯುತ್ತಿತ್ತು.

೧೯೩೯ರಲ್ಲಿ ನನ್ನ ಅವರ ಗೆಳೆತನವಾಯಿತು. ಎಷ್ಟೋ ದಿನ ಅವರೊಡನೆ ಒಡನಾಟ ನಡೆಸಿದೆ. ಅವರ ಕವನ, ಬರಹ, ನಾಟಕ ಅಭಿನಯಗಳನ್ನೆಲ್ಲ ಕೇಳಿದೆ. ಅವರು ನಿಂತು ತಾವೇ ಬಾಯಿ ತೆರೆದರೆ ಸಿಗರೇಟಿನ ಹೊಗೆಯ ಜತೆಗೇನೆ ಅವರನಾಟಕಗಳು ಒಂದೊಂದಾಗಿಉರುಳುವುವು. ಅಂತಹ ಉರುಳಿದ ನಾಟಕಗಳಲ್ಲಿ ಅವರ 'ವರುಣ' ಎಂಬುದು ಅತಿ ಚೆನ್ನಾಗಿತ್ತು. ಉಳಿದುದು ಕಡಮೆಯಲ್ಲ.

ತಿರುಗಿ ನಾನು ಅವರನ್ನೆ ಸಂಧಿಸಿದ್ದು ೧೯೪೬ರಲ್ಲಿ. ಅವರು ನನಗೆ ಆಗಂದರು "ಶಿವರಾಮು ನನ್ನ ಹೊಸನಾಟಕ ಕೇಳಿಲ್ಲವೇ ? ಒಳ್ಳಿತಾಗಿದೆ. ಸನ್ನ "ವರುಣ" ದಂತೆ ನನ್ನ ಇನ್ನಾವ ನಾಟಕವೂ ಇಲ್ಲ ಎಂದರು. "ಕೇಳಿದ್ದೆನೆ" ಎಂದೆ.

ಮಗದೊಮ್ಮೆ ನನ್ನ ಅವರ ಮುಲಾಖತು ೧೯೫೦ ರಲ್ಲಿ ನಡೆಯಿತು. ಅವರು ನನ್ನನ್ನು ಕಂಡೊಡನೆಯೇ "ಶಿವರಾಮು, ಗುಡ್‌ನ್ಯೂಸ್ ನೀನು ನನ್ನ ಬ್ರಾಂಡ್ ನ್ಯೂಪ್ಲೇ ಕೇಳಿಲ್ಲವೇ, ಕೇಳಲೇಬೇಕು, ಹುಡುಗ—"ಎಂದರು.

ಏನದು—ಎಂದು ಕೇಳಿದೆ.

"ನನ್ನ ಹಚ್ಚ ಹೊಸ ಮಣನಾಟಕ" —ಎಂದರು.

* * *

೩

ನನ್ನೊಬ್ಬ ಮಿತ್ರರು; ಅಖಂಡದೇಶಭಕ್ತರು. ನಮ್ಮೂರಿನ ಎಲ್ಲಾ ಕಾಂಗ್ರೆಸು ಚಳವಳಿಗಳಿಗೆ ಕಂಟ್ರಾಕ್ಟರರೇ ಅವರಾಗಿದ್ದರು. ಹರಿಜನ, ಖಿಲಾಫತ್ತು, ಖಾದಿ ಪ್ರಸಾರ, ಟೆಂಪ್‌ರೆನ್ಸುಗಳೆಲ್ಲಕ್ಕೂ ಅವರು ಮುಂದಾಳು. ನನಗೂ ಇವುಗಳಲ್ಲಿ ವಿಷಯ ಭ್ರಮೆ, ಹೀಗಾಗಿ ಒಮ್ಮೆ ಪರಿಚಯನ್ನರಾದ ಅವರಲ್ಲಿಗೆ ಹೋಗಿದ್ದೆ.

ಅವರು ಮೆಲ್ಲಗೆ ಐದು ಮಿನಿಟಿಗೊಂದರಂತೆ, ತಲೆಯಿಂದ ಹೇನನ್ನು ಹೆಕ್ಕಿ ಮೇಜಿನ ಮೇಲೆ ಇರಿಸುವ ಬೇಟೆಗಾರರಂತೆ, ಒಂದೊಂದೇ ಮಾತನ್ನಾಡುವವರು. ಬಲು ಹೊತ್ತು ಮಾತನಾಡಿದ ನಂತರ "ಕಾರಂತರೆ, ಮುಖ್ಯವಿಷಯ ಇದು—ಒಂದು ಖಾದೀ ನೆಯ್ಗೆಯ ಡಿಪೋ ಮಾಡುವ—"ಎಂದರು. ಅದಕ್ಕೆ ತಾಸೂವರೆ ಸರಿದಿತ್ತು. ವೇಳೆಯಾಯಿತು—ಎಂದು ನಾವು ಇನ್ನೊಮ್ಮೆ ಸೇರುವ ಯೋಚನೆಯಿಂದ ಹೇಳಿದೆವು.

ತಿರುಗಿ ಅನೇಕ ಬಾರಿ ಸಂಧಿಸಿದೆವು. ಅವರಿಗೆ ಬಿಡುವಾಗಲಿಲ್ಲ. ವಿಷಯ ಪ್ರಸ್ತಾಪಕ್ಕೆ ಮೂರುತಿಂಗಳ ಬಳಿಕ ಇನ್ನೊಮ್ಮೆ "ನನಗೊಂದು ಹೊಸ ಯೋಚನೆಯಾ

ಗಿದೆ ಎಂದರು."—"ಏನು ? ಎಂದೆ" "ನಮ್ಮ ಊರಲ್ಲಿ ನಾಲ್ಕು ಖಾದಿ ನೆಯ್ಗೆಯ ಮಗ್ಗಗಳನ್ನಿರಿಸುವ" ಎಂದರು.

ತಿರುಗಿ ವರುಷದ ಬಳಿಕ ನಾನವರನ್ನೆ ಸಂಧಿಸಿದೆ "ನಾನು ಮಗ್ಗ ತರಿಸುವ ನಿಶ್ಚಯ ಖಂಡಿತ ಮಾಡಿದ್ದೇನೆ" ಎಂದರು.

ಮೂರುವರ್ಷದ ಬಳಿಕ ನಾನು ಭೇಟಿಯಾದಾಗ "ಕಾರಂತರೇ, ನಮ್ಮ ಊರಲ್ಲಿ ಖಾದಿನೇಯುವ ಏರ್ಪಾಡು ಮಾಡಿದರೆ ಚೆನ್ನಾಗಲಿಕ್ಕಿಲ್ಲವೇ ? ''—ಎಂದರು.

ಮಾಡಿದರೆ ಏನಾದೀತೆಂಬ ವಿಷಯ ಅವರನ್ನು ಬಿಟ್ಟು ಉಳಿದವರಿಗೆ ಅನುಮಾನವೇ ಬರಲಾರದು. ಈಗ ಅವರು ಯುದ್ಧದ ಮುಂದಾಳುಗಳು ಅದರೂ ನಡುನಡುವೆ ಅವರಿಗೆ ಖಾದಿ ಕನಸು ಬೀಳುತ್ತಿರಬಹುದೆಂದೇ ನನ್ನ ಯೊಚನೆ.

೪

ಇನ್ನೊಂದು ಸಂದರ್ಭ ಹೆಸರಾದ ಪ್ರಾಕ್ತನ ಸಂಶೋಧಕರು. ವಾಸ್ತು ಶಿಲ್ಪದ ಮೇಲೆ ಸಚಿತ್ರ ಮಾಯಾಲಾಂದ್ರದ ಉಪನ್ಯಾಸ ಕೊಡುವರೆಂದು ವದಂತಿಯಾಯಿತು. ನನಗೋ, ಮೊದಲಿನಿಂದಲೂ ವಾಸ್ತುವಿನ ಮೇಲಿನಅಭಿಮಾನ ನನ್ನಂತೆ ಅನೇಕರುಗುಡಿಗೋಪುರಗಳನ್ನುಮಾಯಾಲಾಂದ್ರದ ಚಿತ್ರಗಳಲ್ಲಾದರೂ ನೋಡುವ ಎಂದು ಕಲೆತವು.

ಸುಂದರ ಸಭಾ ಭವನದಲ್ಲಿ ಅವರ ಉಪನ್ಯಾಸ ತೊಡಗಿತು. ಉಪನ್ಯಾಸಕರ್ರು ಮಾಯಾಲಾಂದ್ರ ಸಮ್ಮುಖದಲ್ಲಿ ನಿಂತು ವಿಷಯವನ್ನು ತೊಡಗಿದರು. ವಿಷಯವೊ ದಿವ್ಯವಾದುದು-ಹೊಯ್ಸಳ ವಾಸ್ತುಶಿಲ್ಪ ! ವಿದ್ಯುದ್ದೀಪಗಳು ನೊಂದಿದುವು. ಬಿಳಿತೆರೆಯೊಂದು ಮಿನುಗಿತು. ಕರಿಯುವರಾದ ಉಪನ್ಯಾಸಕರು ಅದೃಶ್ಯರಾಗಿ ಬರಿಯ ಅವರ ದನಿಯೊಂದೇ ಕೇಳಿಸಿತು. ಆ ಮೇಲೆ ತೆರೆಯ ಮೇಲೆ ಚಿತ್ರಗಳು ಉರುಳಿದುವು. ಹಾಗೆಂದು ತಿಳಿದವು. ಕಾರಣ ಲಾಂದ್ರದಿಂದ ಹೊರಟ ಬಿಳಿಯ ಬಿಂಬವು ಮುಂದೆ ಕಾಣಿಸಲಿಲ್ಲ, ಸಮಸ್ತವೂ ಗಾಡಾಂಧಕಾರವಾಯಿತು ಶೋತೃಗಳ ಪಾಲಿಗೆ. ಉಪನ್ಯಾಸಕರು ಉತ್ಸಾಹದಿಂದ "ಇದೋ ನೋಡಿ, ಇದು ಕೇದಾರೇಶ್ವರನ ಗುಡಿ ಏನು ಭವ್ಯವಾಗಿದೆ ! ಇದೇ ಸ್ತಂಭರಾಜಿ ಏನು ದಿವ್ಯವಾಗಿದೆ ! ಇದೇ ಶಿವತಾಂಡವ ವಿಗ್ರಹ ಏನು ಕಾವ್ಯವಾಗಿದೆ ! ಇದೇ ಕೃಷ್ಣಮೂರುತಿ ಎಷ್ಟು ಅನುಪಮವಾಗಿದೆ ! ಎಂದು ಹೇಳುತ್ತ ಹೊದರು. ಭವ್ಯ, ಕಾವ್ಯ ದಿವ್ಯ, ಅನುಪಮ, ಅಮೋಘ, ಅತಿಶಯ ಇತ್ಯಾದಿ, ಇತ್ಯಾದಿ, ಸುಪರ್ಲೆಟಿವ್ ಭರಿತವಾದ ವಾಣಿಯನ್ನು ನಾವು ಕೆಳಿದೆದೇ ಹೊರತು, ಪಾಪಿಗಳಾದ ನಮಗೆ ತೆರೆಯು ಏನನ್ನಾದರೂ, ಕೊನೆಗೆ ಬರಿಯ ಛಾಯಾ ವ್ಯತ್ಯಾಸಗಳನ್ನಾದರೂ ತೋರಿಸಬೇಡವೇ.

ನಾವೂ ಚೆನ್ನಾಗಿದೆ ಎಂದು ಒಂದು ಕಾಸಿನ ಸುಖವನ್ನು ಅನುಭವಿಸಿ ಹೊರಗೆ ಬಂದೆವು.

ಅಲ್ಲಿಗೆ ಬಂದಿದ್ದ ಯಾರನ್ನೋ ಕೇಳಿದೆವು—'ಏನಯ್ಯ, ಇದು ಬರಿಯ ಶ್ರಾವ್ಯ ಕಾವ್ಯವಾಯಿತಲ್ಲ. ದೃಶ್ಯಭಾಗ ತಿಳಿಯಲಿಲ್ಲ—ನಿಮಗೆ ತಿಳಿಯದೇ ಎಂದ್ರು.

ಅವರೆಂದರು "ಏಲೆಕ್ಟ್ರಿಕ್ ಲೈಟ್ ಕ್ಷೀಣ ವಾಗಿತ್ತು....ಬೆಳಕು ಉರಿಯುತ್ತಿರಲಿಲ್ಲ ಸಮನಾಗಿ'

ಹಾಗಿದ್ದರೆ ಉಪನ್ಯಾಸಕರು ಹೇಗೆ "ದಿವ್ಯ, ಭವ್ಯ, ಕಾವ್ಯಗಳನ್ನೆ ಕಟ್ಟಿದರು" ಎಂದು ಅನುಮಾನಿಸಿ ನುಡಿದೆವು.

'ಅಯ್ಯೋ, ಅದೇ ಕವಿ ಸಾಕ್ಷಾತ್ಕಾರ-ಎಂಬುದು. ಅಲ್ಲದೆ ಸತ್ಯಕ್ಕೆ ಕತ್ತಲೇನು' ಬೆಳಕೇನು "

※

ನಮ್ಮೊಬ್ಬ ಗೆಳೆಯರು ಕೋಕಿಲ ಕಂಠರು. ಹಾಡುವುದರಲ್ಲಿ ನಿಪುಣರಾದ ಬಳಿಕ, ಊರಿನ "ಎಮ್ಮೆಚೂರು'' ಗಳು ಅವರನ್ನೇ ಕರೆದು ನಾಟಕವೊಂದರಲ್ಲಿ ಪಾರ್ಟು ಕೊಡಿಸಿದರು, ನಾಟಕವೊ ಹೆಸರಾದುದು, ಶೂದ್ರಕನ 'ಮೃಚ್ಛಕಟಿಕ' ಆದಿನ ಕೇವಲ ನಮ್ಮ ಗೆಳೆಯನ ಸೂತ್ರ ಧಾರನ ಪಾರ್ಟನ್ನು ನೋಡುವುದಕ್ಕೇನೆ ಜನ ಜಮಾಯಿಸಿತ್ತು ಎಂದು ಅವರ ಅಭಿಪ್ರಾಯ.

ಜರಿ ರುಮಾಲೆ, ಶಾಲುಗಳಿಂದ ಅಲಂಕೃತರಾದ ನಮ್ಮ ಮಿತ್ರರು " ಎಮ್ಮೆ ಚೂರಿಗೆ ನಾನು ಸೇರಿದರಾ ಚೂರಿಮ್ಮೆ ಯಲ್ಲಿ ಎಂದೆಂ ಬಂತೆ ಕಂಗೊಳಿಸಿದ್ದರು. ಪಂಡಿತ ಶಾಮರಾವರ ಮುಂದೆ ಅವರು ನಾಂದಿ ಶ್ಲೋಕವನ್ನು ಹಾಡಿ, ನನ್ನ ಯನ್ನು ಕರೆದು 'ಪ್ರಿಯೇ-ಹೊಟ್ಟೆಗೆ ಅನ್ನ ವಿಲ್ಲದೆ ನಾನೆಷ್ಟು ಕೃಶನಾಗಿರುವೆ '' ಎಂದಾಗ ಸಭಾಗಣವು ಕರತಾಡನವನ್ನೆಸಗಿತು. ಚಪ್ಪಾಳೆ ನಿಲ್ಲಲು ಬಲು ಸಮಯ ಹೋಯಿತು.

ಎಲ್ಲ ಚಪ್ಪಾಳೆಗಳು ತಮ್ಮ ವಿಜಯಶೀಲ ಪಾರ್ಟಿಗೆ ಎಂದು ತಿಳಿದು ಅವರು ತಮ್ಮ ಏರ್ಪಾಟು ಮುಗಿಯುತಲ್ಲಾ ಎಂದು ಸಖೇದದಿಂದ ತಮ್ಮ ಸೂತ್ರಧಾರತ್ವವನ್ನೆ ಮುಗಿಸಿದರು.

ಆದರೆ ಸಭಿಕರಿಗೆ ಒಂದು ಅನುಮಾನ ಇಂದಿನ ತನಕ ಉಳಿದಿದೆ. ಗೋರಿಂಗರ ಮುಮ್ಮಡಿ ಗಾತ್ರವಾಗಿರುವ ನಮ್ಮ ಆ ಗೆಳೆಯರು ಹೊಟ್ಟೆಗಿಲ್ಲದಿರುವಾಗಲೇ ಅಷ್ಟು ದಪ್ಪನಾಗಿದ್ದರೆ, ಅದು ನಿವಾರಣೆ ಯಾದುದೇಆದಲ್ಲಿ ಹೇಗಾದಾರು-'' ಎಂಬ ಅನುಮಾನ ಆ ಜಗತ್ತಿಗೆಇನ್ನು ಉಳಿದಿದೆ.

※

ನನಗೊಬ್ಬ ಕವಿ ಮಿತ್ರರು. ಅವರು ಬರೆದಿರುವ ಕವನಗಳಿಗಿಂತ ಬರೆಯುವೆ ನೆಂದಿರುವ ಕವನವೇ ಬಹಳ. ಅವುಗಳ ವಿಷಯವಾಗಿ ತಮ್ಮ ಊಹೆ, ಭಾವನೆ ಗಳನ್ನು ಗೆಳೆಯರೊಡನೆ ಕವನವಾಗಿಯೇ ಹಾರಿಸಿ ಬಿಡುತ್ತಾರೆ. ಯೋಗ್ಯ ಮುದ್ರಣದ ಕಾಗದ ದೊರೆಯುವತನಕ ಅದನ್ನು ಲೇಖನಿಸುವುದಿಲ್ಲ.

ಒಂದು ದಿನ ನಮ್ಮ ಬೇರೊಬ್ಬ ಗೆಳೆಯರೊಂದಿಗೆ ಅವರು ತಮ್ಮ "ಸಾಗರ" ವೆಂಬ ಭಾವಿ ಕವನ ವಿಚಾರವನ್ನೇ ಹೇಳಿದರು.

ಈ ಗೆಳೆಯರು ಅರಿಯದ ಸಾಧುಗಳು. ಅವರೊ 'ಚೆನ್ನಾಗಿದೆ ಐಡಿಯಾ" ಎಂದರು.

ಅದೇ ಐಡಿಯಾ ಸಾಧುಗಳ ಬಾಯಿಂದ ಅವರ ಗೆಳೆಯರಾದ ಕವಿಯಿನ್ನೊ

[೩೫ನೇ ಪುಟವನ್ನು ನೋಡಿ]

ವರ ಪಡೆದದ್ದು

ಆಗ ನಾನು ಹತ್ತೊಂಬತ್ತು ವರ್ಷದ ಹುಡುಗ; ಹಾಯಾಗಿ ಹಾಸ್ಟಲಿನಲ್ಲಿದ್ದೆ. ಸರಿಯಾದ ಪ್ರಾಯ ಅಂತ ಹೆಣ್ಣು ಹೆತ್ತವರೆಲ್ಲರೂ ಒಪ್ಪುವಹಾಗೆ ಬೆಳೆದಿದ್ದೆ.

ಹಿಂದಿನ ಬೇಸಿಗೆಯಲ್ಲೇ ನನ್ನ ಸಹಕೋಣನಿಗೂ (ಅಂದರೆ, ನನ್ನ ಕೋಣೆಯಲ್ಲಿ ವಾಸಿಸುತ್ತಿದ್ದ ಗೆಳೆಯನಿಗೂ) ಇತರ ಗೆಳೆಯರಿಗೂ ಮದುವೆಯಾಗಿ ಬಿಟ್ಟಿತ್ತು. ಕಾಲೇಜು ಬಾಗಿಲು ತೆಗೆದ ದಿನವೇ ಅವರೆಲ್ಲರೂ ಹೊಸಕೊಡೆ ಹೊಸ ಪಾದರಕ್ಷೆ ಮೊದಲಾದ ಕಾಶೀಯಾತ್ರೆ ಉಪಕರಣಗಳನ್ನೂ ಮುಲಾಮುಗುಂಡಿಸಹಿತವಾದ ರೇಷ್ಮೆ ಷರ್ಟು ನಶ್ಯದ ಬಣ್ಣದ ಉಲ್ಲನ್ ಕೋಟು, ಉಂಗರ ಮುಂತಾದ ಗೃಹಸ್ಥಾಶ್ರಮದ ಹೊಸ ಗುರುತುಗಳನ್ನೂ ತಂದು ಮೆರೆದಿದ್ದರು. ನಮ್ಮಲ್ಲನೇಕರಿಗೆ ಆಗ ಹೊಟ್ಟೆಯಲ್ಲಿ ಕಿಚ್ಚು ಕೆರಳಿತು. ಹೊಸ ವರಗಳ ಹಿಮ್ಮಡಿಯಲ್ಲಿ ಇನ್ನೂ ಅರಸಿನಕೂಡ ಮಾಸಿರಲಿಲ್ಲ; ಕೆಲವರ ಕೆನ್ನೆಮೇಲೆ ಇನ್ನೂ ಕೆಂಪುಗೆರೆಯ ಅವಶೇಷಗಳಿದ್ದುವು. ಕೆಲವರು ಪೂರ್ವ ಜನ್ಮ ಪುಣ್ಯ ವಿಶೇಷದಿಂದ ಸಬ್‌ರೆಜಿಸ್ಟ್ರಾರ್ರುಗಳು, ತಾಲೂಕ್ ಆಫೀಸ್ ಶಿರಸ್ತೇದಾರರು, ಪೋಲೀಸ್, ಎಕ್ಸೈಸ್ ಮುಂತಾದ ಇಲಾಖೆಗಳ ಇನ್ಸ್‌ಪೆಕ್ಟರುಗಳು, ಎಕ್ಸಿಕ್ಯೂಟಿವ್ ಇಂಜನೀಯರುಗಳು ಮುಂತಾದವರನ್ನು ಮಾವಂದಿರಾಗಿ ಪಡೆದಿದ್ದರು. ಇಂತಹವರ ಅಳಿಯಂದಿರ ಮುಖದಲ್ಲಿ ಒಂದು ರೀತಿಯ ಠೀವಿ ಮಿರುಗುತ್ತಿತ್ತು; ಸ್ಕೂಲ್‌ಮೇಷ್ಟರುಗಳ ಅಳಿಯಿಂದರ ಮುಖದಲ್ಲಿ ಒಂದುರೀತಿಯ ಭೇಸ್ತು ಜಿನುಗಿತ್ತಿತ್ತು; ಲಾಯರು ಅಳಿಯಂದಿರ ಮುಖಗಳಲ್ಲಿ ಸದಾ ಸಡಗರದಿಂದ ಬೆರೆತ ಕಳವಳ ಕಾಣಿಸುತ್ತಿತ್ತು. ಹೀಗೆ ನಮ್ಮ ಸ್ನೇಹಿತರ ಶ್ವಶುರವರ್ಗವನ್ನು ನಾವು ಅವರ ವದನವೇದನೆಯಿಂದಲೇ ಗೊತ್ತುಮಾಡುತ್ತಿದ್ದೆವು. ಅನೇಕರು ಆಗಲೇ ತಮ್ಮ ಹಣಕಾಸಿನ ವ್ಯವಸ್ಥೆಯನ್ನು "ಪ್ರಾರಬ್ಧ ತಂದೆ"ಯಿಂದ "ಆಲಬ್ಧ ತಂದೆ"ಯ ವಿಳಾಸಕ್ಕೆ ಬದಲಾಯಿಸಿ ಬದುಕನ್ನು ಏರ್ಪಡಿಸಿ ಬಿಟ್ಟಿದ್ದರು!

ನಮ್ಮಕಾಲದಲ್ಲಿ, ಹುಡುಗ ಮೆಟ್ರಿಕ್ಯುಲೇಷನ್ ತಟಾಯಿಸಿ ಇಂಟರ್‌ಮೀಡಿಯಟ್ ಕಂಡಿಯಿಂದತೂರಿ ಜೂನಿಯರ್ ಬಿ. ಎ. ತರಗತಿಯಲ್ಲಿ ಕುಳಿತ ಅಂದರೆಸರಿ, ಅವನ ಕೊರಳಿಗೆ ವಧೂಬಂಧನ ಮಾಡಿಯೇಬಿಡುವರು. ಆಗಿನ ಕಾಲದ ಅತ್ತೆಮಾವಂದಿರಿಗೆ 'ಕಾಲೇಜು' ಅಂದರೆ ಒಂದು ರೀತಿಯ ಹುಚ್ಚುವ್ಯಾಮೋಹ! ಅವರು ಕಾಲೇಜುಗಳ ಹಜಾರಗಳಲ್ಲೂ ಅಂಗಳಗಳಲ್ಲೂ ಏಣಿ ಮೆಟ್ಟಲುಗಳಕೆಳಗೂ ಹಾಸ್ಟಲುಗಳ ಕೋಣೆಗಳಹತ್ತಿರವೂ ಅಡಗಿದ್ದು ಪಿತೂರಿನಡೆಸಿ ಹುಡುಗರನ್ನು ಹಾರಿಸಿಕೊಂಡು ಹೋಗುತ್ತಿದ್ದರು. ಎಷ್ಟೋವೇಳೆ ಮೇಷ್ಟರುಗಳೂ ಈ ಕುಮಾರಾಪಹರಣಕ್ಕೆ ತಮ್ಮ ಕುಯುಕ್ತಿಗಳಿಂದ ನೆರವಾಗುತ್ತಿದ್ದರು.

'ಗಿರಾಕಿ' ಇಷ್ಟು ಹೆಚ್ಚಿದಮೇಲೆ ನಮ್ಮಂತಹವರ ದುರಹಂಕಾರಕ್ಕೆ ಮಿತಿ ಎಲ್ಲಿಂದ ಬರಬೇಕು ? ಇಂಗ್ಲೀಷಿನಲ್ಲಿ ೮ ನಂಬರು ತೆಗೆದ ವೀರ ಕನ್ನಡಿಗನಿಗೂ ಕೂಡ, ಸಾಲದ ಹೊರೆ ಹೊತ್ತು ನಾಲಾದಿಂದ ದೂರವಾಗಿ ಬಿದ್ದಿರುವ ಒಂದೆಕ್ರೆ ಜಮೀನ್‌ದಾರನಿಗೂ ಕೂಡ, ಹಾಸ್ಟಲಿಗೆ ಯಾರಾದರೂ ಕನ್ಯಾಪಿತೃಗಳು ಬಂದರೆ ಬಿಗುಮಾನ ಆವರಿಸಿ ಕೊಂಡುಬಿಡುತ್ತದೆ ! ಅಂತಹವನ ರೂಂಬಾಗಿಲಿಗೆ ಇಂಗ್ಲೀಷ್ ಪ್ರೊಫೆಸರುಗಳು ಡಿಸ್ಟ್ರಿಕ್ಟ್ ಇಂಜನೀಯರುಗಳೂ ಸಬ್‌ಜಡ್ಜಿಗಳೂ ಮೂರು ಹೊತ್ತೂ ತಿರುಗುತ್ತಲೇ, ಇರಬೇಕೆಂಬ ಆಸೆ ಅವರಿಗೆ !

ನಮ್ಮೂರಲ್ಲಿ, ನಮ್ಮ ಬೀದಿಯಲ್ಲೇ, ಕೆಂಪು ಮಹಡಿಮನೆಯಲ್ಲಿ ಒಬ್ಬರು ಸಬ್ ಡಿವಿಷ‌ನ್ ಆಫೀಸರಿದ್ದರು ! ಅವರ ಪ್ರತಾಪವೋ ಪ್ರತಾಪ ! ' ಮೂರು ಲೋಕಗಳೂ ಕೊಡೆಯ ನೆರಳಲ್ಲೇ ನಿಂತಿವೆ ಎಂಬ ಅಹಂಕಾರ ಅವರದು. ಬೀದಿಯಲ್ಲಿ ಹೋಗು ವಾಗ, "ನಾನು ಯಾರು ಗೊತ್ತೆ ? ಸಬ್-ಡಿವಿ-ಷ‌ನ್-ಆ....ಫೀ....ಸರ್ ಅಂತ ಅತ್ತ ಕಡೆ ಇತ್ತಕಡೆ ಸಾರುತ್ತ ಹೊಗುವಂತಿತ್ತು ಅವರ ತಲೆಯಲ್ಲಾಡಿಸುವ ರೀತಿ !" ತಮ್ಮ ಪ್ರಭಾವನ್ನೇ ಹಗಲಿರುಳೂ ಧ್ಯಾನಮಾಡುತ್ತಾ ಅವರು 'ತದೇಹ ಧ್ಯಾನ'ದಲ್ಲೇ ನಿರತ ರಾಗಿ ಉಳಿದ ದೇಹಗಳನ್ನೆಲ್ಲಾ ಮರೆತುಬಿಟ್ಟಿದ್ದರು. ಆ ಮನುಷ್ಯನಿಗೆ ಒಬ್ಬಳು ಮಗಳು ! ಒಬ್ಬಳೇನು ? ಏಳೆಂಟು. ಆದರೆ ಮದುವೆ ವಯಸ್ಸಿಗೆ ಬಂದವಳು, ಒಬ್ಬಳು ! ಆಗಿನಕಾಲದಲ್ಲಿ ಇಂತಹ ಒಂದು ಮಗಳಿದ್ದರೆ ಮಹಾರಾಜರುಗಳೂ ಕೂಡ ಮೆತ್ತಗಾಗುತ್ತಿದ್ದರು. ಸರಿ ! ಸಬ್-ಡಿ-ವಿ-ಷ‌ನ್-ಆ-ಫೀ-ಸಿಗೆ ನಾಲ್ಕು ತಿಂಗಳು ರಜಾಪಡೆದು, ಅವರು ಕಾಲೇಜು ಹಜಾರಸೇರಿದರು. ! ಆಫೀಸಿನಲ್ಲಿ ಅವರಿಗೆ ಅಭ್ಯಾಸವಾಗಿದ್ದ ರೀತಿಯಲ್ಲಿ ಅವರು ಒಂದು ಫೈಲುತೆಗೆದು ಜಾತಕಗಳನ್ನೂ ಕಾಗದ ಪತ್ರಗಳನ್ನೂ ಅದರೊಳಗೆ ನಂಬರುವಾರು ಜೋಡಿಸಿಟ್ಟರು. ಅವರು ನನ್ನನ್ನೂ ಮಾತನಾಡಿಸಿದರು. ಆದರೆ ನನ್ನ ಕನಸುಗಳಲ್ಲಿ ನಾನು ಸಬ್‌ಡಿವಿ ಷನ್ನಿಗಿಂತ ಡಿವಿಷನನ್ನೇ ಎದುರುನೋಡುತ್ತಿದ್ದೆನಾದ್ದರಿಂದ ಅವರ ಗಾಳಕ್ಕೆ ನಾನು ಮರುಳಾಗಲಿಲ್ಲ; ಅದೂ ಅಲ್ಲದೆ, 'ಸಗೋತ್ರ'ಅಂತ ಬೇರೆ ಅಂದರು, ಅವರು. ಆದರೂ ಇತರ ವಿದ್ಯಾರ್ಥಿಗಳ ಸಮಾಚಾರಗಳನ್ನು ತಿಳಿದುಕೊಳ್ಳುವ ಕುತೂಹಲದಿಂದ ಅವರು ನನ್ನ ಬೆನ್ನುಹತ್ತಿದರು ! ದಿನವೂ ಫೈಲನ್ನು ಬಿಚ್ಚಿ ನಾವಿಬ್ಬರೂ ಕುಳಿತು ಚರ್ಚಿಸು ವೆವು. ಒಂದು ದಿನ ಅವರಿಗೆ ಸ್ನೇಹಿತರೊಬ್ಬರು ಬರೆದ ಕಾಗದವನ್ನು ಅವರು ನನಗೆ ಓದಿ ಹೇಳಿದರು:

"ಶ್ರೀಮಾನ್....ಇತ್ಯಾದಿ....ಅವರಿಗೆ. ಹುಡುಗನನ್ನ ನೋಡಿದೆ. ಸುಮಾರಾಗಿ ದಾನೆ; ಎಣ್ಣೆಕೆಂಪು; ಮುಖದಲ್ಲಿ ಕುರುಗಳಿಪ್ಪ ಹತ್ತು ಹನ್ನೆರಡು ಗುರುತುಗಳಿವೆ; ಎಡ ಗಣ್ಣು ಕೊಂಚ ವಾರೆಯಾಗಿದೆ. ಆದರೂ ಪರವಾಇಲ್ಲ. ಸೀನಿಯರ್ ಇಂಟರ್‌ಮೀಡಿ ಯಟ್ಟಿನಲ್ಲಿ ಓದುತ್ತಿದಾನೆ. "ಅಂಥಾ ಬುದ್ಧಿವಂತನೇನೂ ಅಲ್ಲ ; ಹೇಗೊ ಇಲ್ಲಿಯತ ನಕಬಂದ, ಅಷ್ಟೆ. ಮುಂದಕ್ಕೆ ಮುಗ್ಗರಿಸದೇ ಇರಲಾರ," ಅಂತ ಮೇಷ್ಟರುಗಳು ಹೇಳು ತ್ತಾರೆ. ಜಾತಕದಲ್ಲೀ ವಿದ್ಯಾಬಲ ಸೊನ್ನೆ. ತಂದೆ ೨೫ ರೂಪಾಯಿನ ಗುಮಾಸ್ತೆ; ಜನಸ

ಮರಣದ ರೆಜಿಸ್ಟ್ರೇಷನ್ ಆಫೀಸಿನಲ್ಲಿ! ಪುರಂದರ ದಾಸರ ವಂಶೀಕರು! ಹುಡುಗ ಬಳೇಪೇಟೆ ಸಮೀಪದಲ್ಲಿ ಒಂದು ಛತ್ರದಲ್ಲಿ ಊಟಮಾಡುತ್ತಿದ್ದಾನೆ. ೧೦೦೦ ರೂ. ವರದಕ್ಷಿಣೆ ಅಂತ ತಂದೆಯ ಬಲವಂತ; ನೇವೀಬ್ಲೂ ಕೋಟು, ಬೆಳ್ಳಿ ಪಾತ್ರೆಗಳು ಅವುಗಳನ್ನಿಟ್ಟುಕೊಳ್ಳುವುದಕ್ಕೆ ಒಂದು ಒಳ್ಳೇ ಟ್ರಂಕು, ಬೀಗ, ಬೀಗದ ಕೈ ಸಹಿತವಾಗಿ—ಎಲ್ಲವೂ ಬೇಕಂತೆ. ಹುಡುಗನಿಗೆ ಕೆಲ ದಿನಗಳಿಂದಲೂ ಹುಷಾರಿಲ್ಲ. ಮಾತನಾಡುವಾಗ ಕೊಂಚ ತೊದಲುತ್ತಾನೆ. 'ನಿಮ್ಮೂರು ಯಾವುದಯ್ಯಾ' ಅಂತ ನಾನು ಎಲ್ಲೋ ಜ್ಞಾನದಲ್ಲಿ ಅವನನ್ನು ಕೇಳಿಬಿಟ್ಟೆ. ಅದಕ್ಕವನು ಘೂ-ಘೂ-ಘೂ ಅಂತ ಸಾಲಾಗಿ ಪ್ರಾರಂಭಿಸಿಯೇ ಬಿಟ್ಟ. ಅವನ ಮಾತು ಕೇಳಲಾರದೆ ನಾನು ತುಂಕೂರೇ, ತೂಬಿನ ಕೆರೆಯೇ? ತೂರನ ಹಳ್ಳಿಯೇ? ಎಂದು ಆಗಾಗ ಕೇಳುತ್ತಲೇ ಇದ್ದೆ. ನನ್ನ ಪ್ರಶ್ನೆಗಳಿಗೆಲ್ಲ ತಲೆ ಅಲ್ಲಾಡಿಸುತ್ತಾ, ಪಾಪ! ಕಡೆಗೆ ಘುರುವೇಕೆರೆ ಎಂದು ಹೇಳಿ ಮುಗಿಸಿದ. ಮತ್ತೊಂದು ವಿಷಯ. ನೀವು ಅವನನ್ನ ಎಲ್. ಎಲ್. ಬಿ. ತನಕ ಓದಿಸಬೇಕಂತೆ, ಅವನ ತಂದೆ ಹೇಳುತ್ತಾರೆ. ಹುಡುಗ ಹೈ ಕೋರ್ಟ್ಗೆ ಹತ್ತಲೇ ಬೇಕು, ಅಂತ. ಇಂಥ ತೊದಲಿಗನು. ಲಾಯರಾದರೆ ವರ್ಷಾನುಗಟ್ಟಲೆ ಕೇಸುಗಳು ಜರುಗಲೇ ಬೇಕಲ್ಲಾ ಎಂಬುದು ಆತನಿಗೆ ಹೊಳೆದೇ ಇಲ್ಲ! ನಿಮ್ಮ ಕಾಗದವನ್ನೇ ಎದುರು ನೋಡುತ್ತಿರುತ್ತೇನೆ. ಮಾತುಕತೆ ಮುಂದುವರಿಸು ಅಂತ ನೀವು ಬರೆದರೆ ಹಾಗೆಯೇ ಮಾಡುತ್ತೇನೆ."

ಈ ಪತ್ರದ ಮೂಲೆಯಲ್ಲಿ ಸಬ್ ಡಿವಿಷನ್ ಆಫೀಸರು "ಅಪ್ರಯೋಜಕ! ತೊದಲಿಲ್ಲದೆ ಬೇರೆ ಆಸ್ತಿಯೇ ಇಲ್ಲ'' ಎಂದು ಬರೆದಿದ್ದರು. ಆದರೂ ನೋಡಿ, ಆ ಹುಡುಗ ಕಡೆಗೂ ಒಬ್ಬರು ಡಿಸ್ಟ್ರಿಕ್ಟ್ ಜಡ್ಜರ ಮಗಳನ್ನ ಮದುವೆಯಾದನಂತೆ!

ಇಂತಹ ಕಾಗದಪತ್ರಗಳು ಅನೇಕ ಅವರ ಫೈಲಿನಲ್ಲಿದ್ದವು. ಆದರೆ ಎಲ್ಲದರಲ್ಲೂ ಒಂದೇ ಪಲ್ಲವಿ! ಸಬ್‌ಡಿವಿಷನ್ ಸಾಹೇಬರ ಸಂಪತ್ತಿನ ಎಷ್ಟು ಭಾಗವನ್ನು ತಮ್ಮ ಕಿಸೆಯೊಳಕ್ಕೆ ಕಸಿದುಕೊಳ್ಳಬಹುದೆಂಬ ಪಿತೂರಿ! ಆಫೀಸಿನ ಗುಮಾಸ್ತೆಯರೂ ಇತರ ಸಿಬ್ಬಂದಿಗಳೂ ಕನಸಿನಲ್ಲಿ ಕೊಡದಷ್ಟು ಕಿರುಕುಳವನ್ನು ಗಂಡು ಹೆತ್ತ ಗಂಡಸರು ಆ ಸಬ್ ಡಿವಿಷನ್ ಆಫೀಸರಿಗೆ ಕೊಡುತ್ತಿದ್ದರು.

ಕಡೆಗೆ ಆ ಆಫೀಸರಿಗೆ ಒಬ್ಬ ಹುಡುಗ ಸಿಕ್ಕಿದ. ಲಗ್ನ ಗೊತ್ತುಮಾಡಿದರು, ಬೀಗರೂ ಬಂದಿಳಿದರು. ಆದರೆ ರೈಲು ಸ್ಟೇಷನ್ನಿನಲ್ಲಿ ಅವರನ್ನು ಸ್ವಾಗತಿಸಲು ಸಬ್ ಡಿವಿಷನ್ ಸಾಹೇಬರೇ ದಯಮಾಡಿಸಲಿಲ್ಲ ಎಂಬ ಅಪಮಾನಕಾರವಾದ ಪರಿಸ್ಥಿತಿಯಿಂದ ಬೀಗರ ಮನಸ್ಸು ಹದಗೆಟ್ಟಿತು. "ಮರ್ಯಾದೆ ಇಲ್ಲದ ಮಂಕ ! ಎಂದು ಬೀಗರ ಕಡೆಯವರು ಸಾಹೇಬರನ್ನು ಬೈದರು. ಅಳಿಯನಿಗಂತೂ ಫೂರಾರೇಗಿತ್ತು" ಇಂತಹ ಮುಠ್ಠಾಳರಿಗೆಲ್ಲಾ ಒಂದು ಪಾಠ ಕಲಿಸಲೇಬೇಕು. ಎಂದು ಅರ್ಭಟಿಸುತ್ತಾ ಜಟಕಾಗಳನ್ನು ಸ್ಟೇಷನ್ ಕಡೆಗೆ ತಿರುಗಿಸಿದ. ಸಬ್ ಡಿವಿಷನ್ ಸಾಹೇಬರ ಅಹಂಕಾರ

ವೆಲ್ಲವೂ ಹಾಳಾದವು. ಆವರು ಏಡುತ್ತಾ ಓಡಿ ಸ್ಟೇಷನಿಗೆ ಓಡಿಹೋಗಿ ಬೀಗರ ಕಾಲಿಗೆ ಬಿದ್ದು, ದಮ್ಮಯ್ಯ ದತ್ತಯ್ಯ ಅಂತ ಅಂಗಲಾಚಿದರು.

ಧಾರೆ ದಿನ ಬೆಳಗ್ಗೆ ಬೀಗ ಮಹಾಶಯರು ಬೆಳ್ಳಿ ಪಾತ್ರೆಗಳನ್ನೆಲ್ಲ ತೂಕ ಮಾಡಿಸಿ ಬೆಲೆ ಅಂದಾಜು ಮಾಡಿಸಿದರು. ಸಬ್ ಡಿವಿಷನ್ ಆಫೀಸರು ಅನೇಕ ಸಾರಿ ಆಸ್ತಿಪಾಸ್ತಿಗಳ ಬೆಲೆಯನ್ನು ಅಂದಾಜು ಮಾಡುವ ರೀತಿಯಲ್ಲೇ ಬೀಗರ ಮಹಾ ಜರೂ ನಡೆಯಿತು. ಹೇಳಿದ್ದ ಮೊತ್ತಕ್ಕಿಂತ ಕಡಿಮೆ ಬಂದದ್ದರಿಂದ ಕೂಡಲೇ ಕೊಂಚ ನಗದನ್ನು ತೆತ್ತು ಮಾನವನ್ನುಳಿಸಿಕೊಳ್ಳಬೇಕಾಯಿತು. ಧಾರೆ ದಿನ ಸಂಜೆ ಬೀಗರು ತಮ್ಮನ್ನಿಳಿಸಿದ್ದ ಬಂಗಲೆಯಿಂದ ಹೊರಕ್ಕೆ ಬರಲೇ ಇಲ್ಲ. ಅಳಿಯನಿಗೆ ಕೊಟ್ಟ ವಲ್ಲಿಯಲ್ಲಿ ಜರಿ ಅಗಲ ಸಾಲದೆಂಬುದೇ ಅವರ ಫಿರ್ಯಾದು ! ಸರಿ! ಅದ ಕ್ಕೊಂದು ಏಳು ರೂಪಾಯಿ ಜುಲ್ಮಾನೆ ಬಿತ್ತು, ಸಬ್ ಡಿವಿಷನ್ ಆಫೀಸರಿಗೆ ! ಹಾಗಾಗಿ ಹೀಗಾಗಿ ಅಲೆದು ಅತ್ತಿಕಾಯಾಗಿ ಸಾಹೇಬರ 'ಅಹಂ ಖಾರ' ಬರ ಬರುತ್ತಾ ಕೇವಲ ಸಪ್ಪೆ ಆಯಿತು.

ವಿದ್ಯಾವಂತರಾದ ಹುಡುಗರು ಹೀಗೆ ಸುಲಿಗೆ ಮಾಡುತ್ತಿರುವುದನ್ನು ಕಂಡು ನಿಮಗೆ ಕೋಪ ಉಕ್ಕಿ ಬರುತ್ತಿರಬಹುದು. ಆದರೆ, ಇತ್ತೀಚೆಗೆ ಈ ಮೋಹ ಮಾಯವಾಗುತ್ತಿದೆ. ಪದವೀಧರರು ತಾಸಿಗೆ ಮೂರು, ಉಸಿರಿಗೆ ನಾಲ್ಕು ತಯಾ ರಾಗುತ್ತಿರುವಾಗ ಮಾವಂದಿರು ಕಾಲೇಜುಗಳಿಗೆ ಹೋಗುವುದೇ ಕಡಿಮೆಯಾಗಿದೆ. ದೂರದಿಂದಲೇ ಅವರು ಅವಿವಾಹಿತ ಬಿ. ಎ. ಗಳಿಗೂ ಬ್ರಹ್ಮಚಾರಿ ಬಿ. ಎಸ್. ಸಿ. ಗಳಿಗೂ ನಮಸ್ಕಾರ ಹಾಕಿ, ಹೊಲ ಗದ್ದೆ ಗಂಟು ಗಾಣ ಇರುವ ಅನುಕೂಲಸ್ಥರನ್ನೇ ಹುಡುಕುತ್ತಿದ್ದಾರೆ.

ಆದರೆ ನಾನು ಹೇಳುತ್ತಿರುವುದು, ನನಗೆ ೧೯ ವರ್ಷವಾದಾಗಿನ ಕಾಲ! ನನ್ನ ಕೊರಳಿಗೂ ಆ ಹಿಂದಿನ ಬೇಸಿಗೆಯಲ್ಲೇ ಜೋಡಿ ಜನಿವಾರ ಸೇರಬೇಕಾಗಿತ್ತು! ಆದರೆ, "ಒಬ್ಬಳೇ ಒಬ್ಬಳು ಮಗಳು, ಗಂಡುಮಕ್ಕಳಿಲ್ಲ. ಆಸ್ತಿ ಅಪಾರವಾಗಿದೆ, ಆಸಾಮಿ ಹೆಚ್ಚು ದಿನ ಉಳಿಯುವ ಹಾಗಿಲ್ಲ" ಎಂಬ ಗುಣಗಳಿದ್ದ ಒಬ್ಬರು ಮಾವಂ ದಿರು ಸಿಗದಿದ್ದುದರಿಂದ ನಾನು ಬ್ರಹ್ಮಚಾರಿಯಾಗಿಯೇ ಉಳಿದೆ.

ವಿಧಿ ವಿಲಾಸವನ್ನು ಬಲ್ಲವರು ಯಾರು? ಕಡೆಗೆ ನಾನು ಕಲ್ಯಾಣಿಯ ಕೈ ಹಿಡಿದೆ.

(ಎಸ್. ವಿ. ವಿ. ವಿ. ಕೃ ಶಂ)

(ಮುಂದಿನ ತಿಂಗಳು:—"ರಂಗಣ್ಣನವರು ಬರದದ್ದು")

ನೀಲಾಂಬರಿ

ಪ್ರಪಂಚದಲ್ಲಿ ಮನುಷ್ಯ ಪ್ರಾಣಿಗೆ ಮಕ್ಕಳಾಗುವುದೇನೂ ಹೊಸದಲ್ಲ. ಇದನ್ನು ಪ್ರತಿಯೊಬ್ಬರೂ ಬಲ್ಲರು. ಆದರೂ, ತಂದೆ ತಾಯಂದಿರು ತಮ್ಮ ಮೊದಲನೆಯ ಮೂರು ಮಕ್ಕಳು ಕೈ ಬೀಸಿದರೆ ಜೈ ಅನ್ನುವರು ; ಆಕಳಿಸಿದರೆ ಆಶ್ಚರ್ಯ ಪಡುವರು ; ತೊದಲು ನುಡಿದರೆ ತೋಳು ಚಪ್ಪರಿಸುವರು ; ಹೊಸಲು ದಾಟಿದರೆ ಹೊರಳಾಡುವರು ! ಯಾರೂ ಮಾಡದ ಮಹಾಕಾರ್ಯವನ್ನು ತಮ್ಮ ಮಕ್ಕಳು ಮಾಡಿದಹಾಗಿನ ಪರಮಾನಂದ ಅವರಿಗೆ ತಾವೇ ಆಕಳಿಸಿದಷ್ಟು, ಆವೇಶ ! ತಾವೇ ತೊದಲಿದಷ್ಟು ತಾದಾತ್ಮ್ಯ ಭಾವ ! ತಾವು ಬೃಹಸ್ಪತಿಯ ಮಾತಾಪಿತೃಗಳು ಎಂಬಷ್ಟು ಹಿಗ್ಗು !

ಈ ಸಂತೋಷವನ್ನು ಬಾಗಿಲು ಹಾಕಿಕೊಂಡು ತಾವೇ ಸವಿದರೆ ಸಾಲದೆ ? ಮನೆಗೆ ಬಂದವರಿಗೆಲ್ಲಾ ಮಗು ಮೂಗಿನ ಸಿಂಬಳವನ್ನು ಹಚ್ಚಿ ಕಳುಹಿಸುತ್ತಾರೆ. ಹುಡುಗನನ್ನ ಸರ್ಕಸ್ ಪ್ರಾಣಿಯಂತೆ ಸಿಂಗರಿಸಿ, ಬಾಲಾಂಗುಚ್ಚಿ ಕಟ್ಟಿ ತಂದು, ನಮ್ಮ ಮುಂದೆ ನಿಲ್ಲಿಸಿ ಆದಕ್ಕೆ ಕಾಸಿನಾಸೆ ತೋರಿಸಿ ಹಂಗಿಸಿ ಹೆದರಿಸಿ ಅದರ ಬಾಯಿಂದ ಬಿದಿಗೆ ತದಿಗೆ ಹೊರಡಿಸುತ್ತಾರೆ. ಇಂತಹ ನೂರೆಂಟು ಪುತ್ರ ಹಿಂಸಾ ಪ್ರಮೇಯಗಳನ್ನು ಕೇಳಿದನಂತರ ಅಂತಹ ಅತಿವಾತ್ಸಲ್ಯದವರ ಮನೆಗಳಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟಿದೇನೆ, ನಾನು. ಎರಡರಿಂದ ಎಂಟರವರಗಿನ ವಯಸ್ಸಿನ ಮಕ್ಕಳಿರುವ ಮನೆಗಳಿಗೆ ಹೋಗದಿರುವುದೇ ಕ್ಷೇಮ.

ಆದರೆ ನಾವಾಗಿ ನುಗ್ಗದೆ ಇದ್ದರೂ ಗ್ರಹಚಾರ ಅಂತ ಒಂದಿದೆಯಲ್ಲಾ ನಾವಿದ್ದ ಕಡೆಗೇ ಆಪತ್ತುಗಳನ್ನು ತಂದೊದಗಿಸುವುದಕ್ಕೆ !

ಮೊನ್ನೆ ನನ್ನ ಪಾಡಿಗೆ ನಾನು ರೈಲಿನಲ್ಲಿ ಹೋಗುತ್ತಿದ್ದೆ, ಟಿಕೀಟು ತೆಗೆದುಕೊಂಡು. ಗಾಡಿಯಲ್ಲಿ ನಾನು, ಇನ್ನೊಬ್ಬಾತ—ಇಬ್ಬರೇ ಇದ್ದೆವು. ಮುಂದಿನ ಸ್ಟೇಷನಿಗೆ ಏದುತ್ತಾ ಇತ್ತು ಎಂಜಿನು ! ಎದುರಿಗಿದ್ದ ಆಸಾಮಿಯ ಷರ್ಟು ಜೇಬಿನ ಕೆಳಭಾಗದಲ್ಲಿ ಕಾಸಿನಷ್ಟಗಲ ಪೆಪ್ಪರ್ಮೆಂಟಿನ ಬಣ್ಣ ಕಾಣಿಸಿತು. ಬಲೆಬಲೆಯಾಗಿದ್ದ ಚೀಲದೊಳಗಿಂದ ಮೂರು ಕಾಸಿನ ತಗಡಿನ ಪೀಪಿಯೊಂದು ನನ್ನನ್ನ ಅಣಕಿಸುತ್ತಿತ್ತು. ಗ್ರಹಚಾರ ! ಮಕ್ಕಳ ತಂದೆ !

ನಾನು ಪೇಪರನ್ನು ಹರಡಿ ಮುಖಕ್ಕಡ್ಡನಾಗಿ ಹಿಡಿದೆ. ಆದರೂ, ಅವರು ಬಿಡಲಿಲ್ಲ. ಯಥಾಪ್ರಕಾರ, "ಮಕ್ಕಳ ಬುದ್ಧಿ ಎಷ್ಟು ಅಂತೀರಾ, ರಾಯರೇ !" ಅಂತ ಪ್ರಾರಂಭಿಸಿಯೇಬಿಟ್ಟರು ! ನನಗೆ ರೇಗಿತು. ಪೇಪರನ್ನು ಕೆಳಗಿಳಿಸಿದೆ. ಮರಮರನೆ ಆ ಪಂಡಿತ ಪಿತನನ್ನೇ ನೋಡು

ತ್ತಾ ಕುಳಿತೆ. "ಮಕ್ಕಳ ಬುದ್ಧಿ ಎಷ್ಟು, ಅಂತೀರಾ"ಅಂದರು, ಮತ್ತೆ. "ಎಷ್ಟು?" ಅಂದೆ !

"ನನ್ನ ಚೇಚ್ಚೂನ ಒಂದು ಸಾರಿ ಮೈಸೂರಿಂದ ಬೆಂಗಳೂರಿಗೆ ಕರೆದು ಕೊಂಡು ಬಂದಿದೇನೆ, ಅಷ್ಟೆ ! ಉದ್ದಕ್ಕು ಎಲ್ಲಾ ಸ್ಟೇಷನುಗಳನ್ನೂ ಹೇಳುತ್ತಾನೆ, ಈಗಲೂ, ಮನೆಯಲ್ಲಿ ಕೆಂಗೇರಿ ಬಿಡದಿ ಹತ್ತಿರ ಮಾತ್ರ ಕೊಂಚ ತಡವರಿಸು ತ್ತಾನೆ, ಅಷ್ಟೆ !"

ನನ್ನ ತುಂಟು ಮೆದುಳು ಕಲಹ ಕೀಟ ಲೆಗಳಿಗಾಗಿ ಹಾತೊರೆಯುತ್ತಿತ್ತು ! ಪೇಪ ರನ್ನು ಬೆಂಚಿನ ಮೇಲಿಟ್ಟೆ. ಅಷ್ಟು ಹೊತ್ತಿಗೆ ಅವರು, "ಯದುರಾಯರಿಂದ ಹಿಡಿದು ಇಲ್ಲಿಯವರೆಗೂ ಯದುವಂಶವ ನ್ನೆಲ್ಲಾ ಹೇಳುತ್ತಾನೆ" ಅಂತ ವಿವರಿಸಿ ಬಿಟ್ಟಿದ್ದರು. ಆಗ ನಾನು ಅವರ ಸ್ತೋತ್ರ ಲಹರಿಯನ್ನು ತಡೆದು, "ಕ್ಷಮಿಸಿ ಸಾರ್" ನಿಮ್ಮ ಹುಡುಗನಿಗೆಷ್ಟು ವಯಸ್ಸು ? " ಅಂಡೆ.

"ಫಾಲ್ಗುಣಕ್ಕೆ ಐದು ತುಂಬಿತು"

"ತುಂಬಿ ಹೋಯಿತೆ ? ಚಿಂತೆ ಇಲ್ಲ. ತಮ್ಮ ಹುಡುಗ ಎಂಟನೆಯ ಹೆನ್ರಿಯ ಹೆಂ ಡಿರ ಹೆಸರುಗಳನ್ನೆಲ್ಲಾ ತಪ್ಪದೆ ಹೇಳುತ್ತಾ ನೆಯೋ ?" ಯಾರೂ, ಏನೋ ಅವರ ಕಳೆಗುಂದಿತು. ನಾನು ಮತ್ತೆ, "ನಿಮ್ಮ ಹುಡುಗ ಆಕಾಶ ನೋಡಿಕೊಂಡು ಮೇಘ ಧೂತ ಹೇಳಬಲ್ಲನೆ ? " ಎಂದೆ. ಅವರ ಮುಖ ಪೆಚ್ಚಾಯಿತು.

"ಐದು ವರ್ಷ, ಅಷ್ಟೆ, ನಮ್ಮ ಚೇಚ್ಚು ವಿಗೆ" ಅಂದರು.

"ಇರಬಹುದು, ಸ್ವಾಮಿ ! ಐದಲ್ಲ, ನಾಲ್ಕೂವರೆ, ಅಂತಲೇ ಇಟ್ಟುಕೊಳ್ಳಿ ! ಆದರೆ ಅಷ್ಟನೆಯ ವಯಸ್ಸಿನಲ್ಲೇ ನಮ್ಮೂರು ಶ್ಯಾನುಭೋಗರ ಹುಡುಗ ಅಪ್ಪನ ಖಾತೆ ಕಿರಿದಿ ಲೆಕ್ಕಗಳನ್ನೆಲ್ಲಾ ತಾನೇ ತಲೆಕೆಳಗಾಗಿ ಬರೆದು ಮುಗಿಸು ತ್ತಿದ್ದ ಒಂದೇ ರಾತ್ರೀಲಿ. ಪ್ರಚಂಡ ಪ್ರಸವ, ಸ್ವಾಮಿ, ಅದು ! ಊಟಕ್ಕೆ ಕೂತಾಗ ಕಬಳಕ್ಕೆ ಒಂದು ಕವನ ಕಟ್ಟುವನು. ಅವನು ಅತ್ತರೆ ರಾಗ ಮಾಲಿಕೆ ! ಮರ ಹತ್ತಿದರೆ ಸಾಕ್ಷಾತ್ "ಆಂಜನೇಯ !"

ಎದುರಿಗಿದ್ದಾತನ ಮುಖದಲ್ಲಿ ಪೆಚ್ಚು ಹೆಚ್ಚಾಯಿತು. ಗಂಟಲು ಸರಿಪಡಿಸಿ ಕೊಂಡು "ಆದರೂ ಮೇಘದೂತನೆಲ್ಲಾ ...."ಅಂತ ಪ್ರಾರಂಭಿಸಿದರು. ಆ ವಾಕ್ಯವನ್ನು ಮುಗಿಸಲು ನಾನು ಅವ ಕಾಶ ಕೊಡಲಿಲ್ಲ.

"ಸ್ವಾಮಿ! ಮಲ್ಲಿನಾಥನಿಗೆ ಮೂರು ವರ್ಷವಾಗಿದ್ದಾಗಲೇ ಅವನು ಕಾಳಿದಾಸ ನನ್ನು ಕೈಯಲ್ಲಿ ಹಿಡಿದನಂತೆ, ಗೊತ್ತಿಲ್ಲವೆ ತಮಗೆ ? "ಭಾರವೇರರ್ಥಗೌರವಂ" ಅಂತ ಕೇಳಿಲ್ಲವೆ ತಾವು ? ಕಾಳಿದಾಸನಿಗೆ ಸಲ್ಲುವುದರ ಅರ್ಥಗೌರವ ಇವತ್ತೂ ಕೂಡ ಸಲ್ಲುವ ಭಾರವಿಗೆ ಮೊದಲನೇ ಹುಟ್ಟಿದ ಹಬ್ಬದ ದಿನ ೧೨ ತಿಂಗಳು, ಅಷ್ಟೆ...."

ಚೇಚ್ಚುವಿನ ತಂದೆ ಕಿಟಕಿಯ ಕಡೆ ನೋಡುತ್ತಾ ಕುಳಿತರು. ಒಂದೆರಡು ಬಿಸುಸುಯ್ದರು ! ಕೊಂಚ ಹೊತ್ತಿನ ಮೇಲೆ ಥಟಕ್ಕನೆ ನನ್ನ ಕಡೆಗೆ ತಿರುಗಿ,

"ಬಿಡಿ ಅಂದ್ರೆ! ಗ್ರಂಥ ಬರೆಯುವು ದೇನು ಮಹಾ! ಶಾಯಿ ಕಡ್ಡಿ ಕೊಟ್ಟರೆ ಮಕ್ಕಳು ಮೂರು ನಿಮಿಷದಲ್ಲಿ ಗೀಚಿ ಹಾಕಿಬಿಡುತ್ತವೆ, ಹಾಳೆತುಂಬ. ಆದರೆ ಐದು ವಯಸ್ಸಿನಲ್ಲೇ ನನ್ನ ಚೇಚ್ಚುವಿನ ಹಾಗೆ ಸಂಗೀತ ಶಾಸ್ತ್ರವನ್ನ...." ಅಂತ ಮತ್ತೆ ಹೊಗಳು ತೆಗೆದರು.

ನನಗೆ ಸಹಿಸಲಿಲ್ಲ. "ಮೊನ್ನೆ ನಮ್ಮೂರಿಗೆ ಒಬ್ಬರು ಒಂದು ಮಗುವನ್ನು ತಂದಿದ್ದರು, ಬಿದಿರು ತೊಟ್ಟಿಲಲ್ಲಿ. ಸಾಕ್ಷಾತ್ ಗಿಣಿ, ಆ ಮಗು! ತಂದೆ ಹೇಳಿಕೊಟ್ಟಿದ್ದ ಹರಿಕಥೆಗಳನ್ನು ತೊಟ್ಟಿಲಲ್ಲೇ ಮಲಗಿಕೊಂಡು ಕಾಲಕ್ಷೇಪ ಮಾಡುತ್ತಿತ್ತು.... ಅದರ ವಯಸ್ಸೆಷ್ಟೋ ಗೊತ್ತಿಲ್ಲ" ಅಂದೆ.

"ಸರಿ, ಬಿಡಿ, ಹಾಗಾದರೆ!" ಅಂದರವರು.

"ಬಿಡುವುದೇನು? ನಿಮ್ಮ ಚೇಚ್ಚುವಿಗಿಂತ ಚಿಕ್ಕದಾಗಿಯೇ ಇರಬೇಕು ಆ ಗಿಣಿ! ಬೆಟ್ಟು ಚೀಪುತ್ತಲೇ "ಏಕಾದಶೀ ಮಹಾತ್ಮ್ಯ"ದ ಕಥೆ ಮಾಡುತ್ತಿತ್ತು" ಅಂದೆ.

"ಹರಿಕಥೆ ಮಾಡಬಹುದು, ಏಕಾದಶೀನೂ ಹೇಳಬಹುದು...........ಆದರೆ ಸಂಗೀತ....ಶಾಸ್ತ್ರ....ನಮ್ಮ ಚೇಚ್ಚು ಹಾಗೆ...." ಅಂದರು, ತಂದೆಯವರು, ಪುತ್ರನ ಮೇಲಿನ ಕುರುಡು ವ್ಯಾಮೋಹದಿಂದ.

ಆದರೆ ನಾನು ಬೇಸ್ತು ಬೀಳಲಿಲ್ಲ. "ನೋಡಿ, ಸ್ವಾಮಿ! ನೀಲಾಂಬರಿರಾಗ ಅಂತ ಕೇಳಿಲ್ಲವೇ ನೀವು. ಅದನ್ನು ಮೊದಲು ಹಾಡಿದವರು ಒಂದು ಸಣ್ಣ ಹೆಣ್ಣು ಕೂಸು. ಎಂಟು ತಿಂಗಳಲ್ಲಿ. ನೀಲಿ ಲಂಗ ತೊಡಿಸಿದ್ದರಂತೆ ಅವತ್ತು...." ಎಂದೆ.

"ಹಾಳಾಗಿ ಹೋಯಿತು....ಹಾಳಾಗಿ ಹೋಯಿತು...." ಅಂತ ಗೊಣಗುತ್ತಾ ಅವರು ಮೂಲೆಯಲ್ಲೇ ಕುಳಿತಿದ್ದರು.

ನಾನು ನಿರಾತಂಕವಾಗಿ ಪ್ರಯಾಣವನ್ನು ಮುಂದುವರಿಸಿದೆ.

—ನಾ. ಕ.

ನವೀನ ಗಾದೆಗಳು—ನ್ಯಾಯಾಸ್ಥಾನ

ಜಡ್ಜಿವರಾಕೊಟ್ಟರೂ ಗುಮಾಸ್ತೆವರಾಕೊಡಲೊಲ್ಲ.

*　*　*

ಚೋಟುದ್ದ ಲಾಯರಿಗೆ ಆಳುದ್ದ ಗುಮಾಸ್ತೆ.

*　*　*

ಕಕ್ಷಿ ಕಣ್ಣೆಲ್ಲಾ ಸಾಕ್ಷಿ ಮೇಲೆ.

*　*　*

ಲಾಯರ ಮೇಲೆ ಲಾಯರು ಬಿದ್ದರೆ
ಸತ್ಯಹೊರ ಬೀಳುತ್ತ್ಯೆ?

ಹನುಮಂತನ ಮುಖ

●

"ಗಂಟೆ ಎಷ್ಟು ? ಸಾರ್ !" ಅಂದ ಹುಡುಗ.

"ಏನಪ್ಪಾ ? " ಅಂದ ಹನುಮಂತ.

"ಎಷ್ಟುಸಲ ಹೇಳಬೇಕ್ರಿ ? ಗಂಟೆ ಎಷ್ಟು ಅಂದೆ " ಅಂದ ಅದೇ ಹುಡುಗ.

"ನಾಲ್ಕೂವರೆ !'' ಎಂದು ಉತ್ತರ ಕೊಟ್ಟ, ಹನುಮಂತ...........

* * * *

"ಸ್ವಾಮಿ ! ಅಮ್ಮಾಸೆ ಯಾವತ್ತು ? " ಅಂದ ಗೌಡ.

"ನಾಳೆ ! ಶನಿವಾರ " ಎಂದು ಅವನಿಗೂ ದಯಪಾಲಿಸಿದ ಹನುಮಂತ........

* * * *

"ಓಹೋ ! ಏನ್ರಿ ! ಬಂದುಬಿಟ್ಟಿರಾ ಅಲ್ಲಿಂದ? ಮುಗಿಯಿತೆ ಮೂರು ತಿಂಗಳು ?'' ಎಂದರಿನ್ನೊಬ್ಬರು.

"ಯಾರು ತಾವು ? ಗೊತ್ತಾಗಲಿಲ್ಲವಲ್ಲಾ ? ಯಾವ ಮೂರು ತಿಂಗಳು ? " ಆಶ್ಚರ್ಯ ತುಂಬಿದ ಧ್ವನಿಯಲ್ಲೇ ಕೇಳಿದ ಹನುಮಂತ.

"ಕ್ಷಮಿಸಿ ! ಕ್ಷಮಿಸಿ ! ಪಕ್ಕದ ಊರು ತಸ್ಕರಯ್ಯನವರು ಅಂತ ತಪ್ಪು ತಿಳಿದು ಕೊಂಡು ಬಿಟ್ಟೆ '' ಅಂತ ಹೇಳಿ ಅವರು ಮುಂದೆ ನಡೆದರು.

* * * *

ಹನುಮಂತನ ಮುಖದಲ್ಲಿರುವ ಪೆಪ್ಪು ಕಳೆಯೇ ಈ ಅವಾಂತರಗಳಿಗೆಲ್ಲ ಕಾರಣ ! ಚಿಕ್ಕವನಾಗಿದ್ದಾಗ ಅವನ ಆನನದಲ್ಲಿ ಒಂದು ತೆರನ ಕಾಂತಿ ಪಸರಿಸಿತ್ತು. ಅವನ ನಂಟರೆಲ್ಲರೂ ತೊಟ್ಟಿಲ ಬಳಿ ಬಂದು ಮಗುವನ್ನು ಬಹುವಾಗಿ ಕೊಂಡಾಡಿದರು. ಕಣ್ಣಿನ ಹೊಳಪನ್ನೂ ಕಿವಿಯ ಚುರುಕನ್ನೂ ಗಂಟಲ ಭೀಷಣತೆಯನ್ನೂ ಹೊಟ್ಟೆ ತುಂಬ ಹೊಗಳಿದರು. "ತೊಟ್ಟಿಲದಾಗೊಂದು ತೊಳದ ಕೆಂಡವ ಕಂಡೆ !'' "ಹೆಂಗಾದ್ರು ಇರಲವ್ವಾ ! ಈ ಕೂಸು ನನಗಂದು " ಮುಂತಾದ ಲಾಲಿಗಳನ್ನು ಹಾಡಿ ಅವರು ಹನುಮಂತನನ್ನು ಲಾಲನೆ ಮಾಡಿದರು. ಬುವ್ವ, ತಾಚಿ, ಪಾಚಿ, ಇಶ್ಶಿ ಎಂಬ ಶಿಶು ಸಾಹಿತ್ಯದ ಮೊದಲ ಮೆಟ್ಟಲುಗಳಲ್ಲಿ ಅವನೂ ಅಂದದಿಂದ ಅಂಬೆ ಕಾಲಿಕ್ಕಿದನು. ಗೋಕುಲದ ನಂದಾದೀಪವಾದ ಗೋವರ್ಧನೋದ್ಧರನಂತೆ ಅವನೂ ತನ್ನ ಮನೆಯನ್ನು ಬೆಳಗಿದ ; ಬೆಣ್ಣೆಯನ್ನು ಕದ್ದು ಮೆದ್ದ ; ಕರುಗಳ ಬಾಲವನ್ನು ಪಿಡಿದೆಳೆದ, ಚಕ್ರವನ್ನುರುಳಿಸಿದ. "ಗೋಧೂಳಿ ಧೂಸರಿತ ಕೋಮಳ ಕುಂತಳಾಗ್ರ " ಗಳನ್ನು ಅವನೂ ಸಂಪಾದಿಸಿದ. ಶಾಲೆಯಲ್ಲಿ ಇತರರಿಗಿಂತ ಹೆಚ್ಚಾಗಿದೆಯೇ ಬಾಸುಂಡೆಗಳನ್ನು ಸವಿದ.

ಇಂಥ " ಶೂರ " ಯುವಕನು ಎಸ್. ಎಸ್. ಎಲ್. ಸಿ. ದಾಟಿ " ಪ್ರಜಾ ಸೇವೆಗೆ ಅರ್ಹನಾಗುವುದರೊಳಗೆ " [Eligible for Publice Service E. P. S.] ಹಲವಾರು ಸಲ ಪರೀಕ್ಷೆಗಳಲ್ಲಿ ಹೊಡೆತ ತಿಂದು ಕಳೆಗುಂದಿ ಕಂಗೆಟ್ಟು ತನ್ನಲ್ಲಿ ತನಗೇ ನಂಬಿಗೆಯಿಲ್ಲದೆ ಕೇವಲ ಬೆಪ್ಪಾದ. ಹುಟ್ಟಿದ ಹತ್ತನೆಯ ದಿನ ನಾಮಕರಣ ಮಾಡಿದ ಹೆಸರು ಅವನಿಗೆ ಈಗಲೂ ಇತ್ತು ; ಹೆಸರು ಅದೇ ಆದರೂ ಬರಬರುತ್ತಾ ಕೆಸರು ತುಂಬದೆ ಕಾಪಾಡುವುದು ಹೇಗೆ ? ಮುಂದಕ್ಕೆ ಹನುಮಂತನ ವರ್ಚಸ್ಸನ್ನು ಸೂರೆ ಮಾಡುವ ಎರಡು ಹೊಸ ಸಂಘಟನೆಗಳು ಸಂಭವಿಸಿದುವು. ಅವುಗಳ ದೆಸೆಯಿಂದ ಬುದ್ಧಿವಂತಿಕೆ ಹೋಗಿ ಅವನ ಮುಖದಲ್ಲಿ ಪೆದ್ದುವಂತಿಕೆ ಬೀಡುಬಿಟ್ಟಿತು. ಮೊದಲನೆಯದು ಮದುವೆ; ಅದರ ಹಿಂದೆ ಪುಂಖಾನುಪುಂಖವಾಗಿ ಬಂದ ಮಕ್ಕಳು ಬಾಲಾರಿಷ್ಟ ಸ್ಕೂಲ್‌ಫೀಜು, ಸಾಲ, ತಾಪತ್ರಯ....ಎರಡನೆಯದು, ಚಾಕರಿ, ಅದನ್ನನುಸರಿಸಿಬಂದ ವರ್ಗಾವರ್ಗಿ, ಮಲೇರಿಯ, ಬೈಗಳು, ಕಿರುಕುಳ, ಜುಲ್ಮಾನೆ, ಹೇಡಿತನ, ಚಾಡಿ............

ಅವನದು ದುಂಡಾವ ವದನ; ಉಬ್ಬುಹಣೆ. ಕಣ್ಣುಗಳೆರಡೂ ತುಸು ಆರಿದ ಕೆಂಡ ತುಂಡುಗಳು. ಕಣ್ಣಿನ ಮೂಲೆಯಿಂದ ಮೇದುಟಿಯ ಕೊನೆಯವರೆಗೆ ಅರ್ಧ ಚಂದ್ರಾಕಾರದಲ್ಲಿ ಕೊರೆದು ಹರಿದಿರುವ ಎರಡು ಖಾಲಿ ಕಾಲುವೆಗಳು. ಮೊಂಡು ಮೂಗು; ಅರೆತೆರೆದ ಬಾಯಿ ಎಡಬಲಕ್ಕೆ ಬಾಗಿರುವ ವಿಶಾಲವಾದ ಕಿವಿಗಳು. ಬಲ ಕಪೋಲದ ಮೇಲೆ ಟಪಾಲ್ ಸ್ಟಾಂಪಿನಷ್ಟು ಅಗಲದ ಕರಿಯ ಮಚ್ಚೆ. ಅವನ ವಯಸ್ಸಿಗೂ ಅವನ ಸನಾತನ ಧರ್ಮ ಪ್ರೇಮಕ್ಕೂ ತಕ್ಕಂತೆ ಗಡ್ಡ ಮೀಸೆಗಳ ಅಲಂಕಾರ. ಅರ್ಧಕ್ಕೆ ಮೇಲಾಗಿಯೇ ಮುಂಡನವನ್ನನುಭವಿಸುತ್ತಿರುವ ಶಿರಸ್ಸು.....ಇಷ್ಟೇ ಹನುಮಂತನ ಮುಖಸಂಪತ್ತು. ಈ ವಿವರಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹನುಮಂತನ ರೂಪವನ್ನು ನೀವು ಭಾವನಾಶಿಲೆಯಿಂದ ಕಡೆದು ಕೊರೆಯುವಾಗ ಯಾವ ಮೂರ್ತಿ ಬಂದು ಕಣ್ಣೆದಿರು ನಿಲ್ಲುತ್ತಾನೋ ನಾನರಿಯೆ!

ಹನುಮಂತನ ಮನೆಯಿಂದ ಮಾರ್ಕೆಟ್ಟಿಗೆ ಅರ್ಧ ಮೈಲಿ ಕೂಡ ಇಲ್ಲ. ಅದೊಂದು ಹಳೆಯ ಹೆಂಚಿನ ಮನೆ. ಆದರೂ ಪೇಟೆಕೋಟೆಗಳಿಗೆ ಹತ್ತಿರವಿರುವುದರಿಂದ ಅದರ ಬಾಡಿಗೆ ಕೊಂಚಹೆಚ್ಚು. ಮನೆಯ ಮಾಲೀಕ ಆಗಾಗ್ಗೆ ಬಂದು ಹನುಮಂತನ ಹತ್ತಿರ 'ನೀವು ಬಿಟ್ಟುಹೋದರೆ ನನಗೆ ಲಾಭ; ಇನ್ನೂ ಎಂಟಾಣೆ ಕೊಡುವ ಬಾಡಿಗೆದಾರರಿದ್ದಾರೆ' ಎಂದು ಹೇಳಿ ಹೆದರಿಸುವನು. ಅವನನ್ನು ಕಂಡರೆ ಹಾಗನ್ನೋಣವೆಂದೆನಿಸುತ್ತದೆಯೋ ಏನೋ ? ಗೊಣಗುತ್ತಾ ಗೊಣಗುತ್ತಾ ಹನುಮಂತ ತೆಪ್ಪಗೆ ಅದೇ ಎಂಟಾಣೆಯನ್ನು ತಾನೇ ಕೊಟ್ಟು ಬಿಡುವನು. ಹನುಮಂತನಿಗೆ ಆತನ ಪಿತೂರಿ ಅರ್ಥವಾಗುತ್ತದೆ; ತನ್ನ ಮುಖದಲ್ಲಿ ಕಾಣಬರುವ ಮಂಕುತನವನ್ನೇ ನೆಚ್ಚಿ ಮನೆ ಮಾಲೀಕ ಹಾಗಂದಿದ್ದಾನೆ. ಎಂಬುದೂ ಅವನಿಗೆ ಗೊತ್ತು. ಆದರೂ ಮಾಡುವುದೇನು? ಬೇರೆಮುಖವನ್ನು ನೀಡಿ ಅಂತ ಗೋಳಾಡಿದರೆ ಬ್ರಹ್ಮ ಬದಲಾಯಿಸುತ್ತಾನೆಯೇ?

ಪರೀಕ್ಷಿಸಿ ನೋಡಿದರೆ, ಹನುಮಂತನ ಮುಖ ಹನುಮಂತನದೇ ಅಲ್ಲ. ಅವನ ಮೂಗು ತಾತನದು; ಕಿವಿಗಳೆರಡೂ ಚಿಕ್ಕಪ್ಪನವರದು; ಉಬ್ಬು ಹಲ್ಲು ಸುಬ್ಬಕ್ಕನದು; ಮುಚ್ಚಿ ಸಾಕ್ಷಾತ್ ಅವರಪ್ಪನದು. ಅವರ ವಂಶವವರ ತಪೋಬಲದಿಂದಲೂ ತಾಯಿ ತಂದೆಯರ ನಾಗ ಪ್ರತಿಷ್ಠೆಯಿಂದಲೂ ಹುಟ್ಟಿದ ಪಾಪಕ್ಕಾಗಿ ಅವನು ಆ ಅವಲಕ್ಷಣ ವಾದ ಮುಖವನ್ನು ಹೊತ್ತುಕೊಂಡು ತಿರುಗಬೇಕಾಗಿದೆ. ಅವನ ಮುಖಕ್ಕಾಗುವ ಮಂಗಳಾರತಿಗಳೆಲ್ಲವೂ ಸುಬ್ಬಕ್ಕ ಚಿಕ್ಕಪ್ಪನವರಿಗೆ ಸಲ್ಲತಕ್ಕದ್ದೆಂದು ಅವನು ಅನೇಕ ವೇಳೆ ಸಮಾಧಾನಪಡುವುದುಂಟು.

ಮನೆಯಿಂದ ಮಾರ್ಕಟ್ಟಿಗೆ ಅರ್ಧ ಮೈಲಿ ನಡೆದು ಹೋಗುವುದರೊಳಗೆ........ ಸಾಮಾನ್ಯವಾಗಿ ನಡದೇ ಹೋಗುತ್ತಾನೆ ಹನುಮಂತ. ಏಕೆಂದರೆ ಬಸ್ ಕಂಡಕ್ಟರು ಗಳಿಗೂ ಅವನಿಗೂ ಆಗಲೇ ಜಗಳಗಳಾಗಿ ಅವನು ಬಸ್ಸು ಹತ್ತುವುದನ್ನೇ ತ್ಯಜಿಸಿದ್ದ. ಜಗಳಗಳೇನು? ಎರಡು ಕೈಗಳೂ ಒಟ್ಟಿಗೆ ಸೇರಿದರೆ ತಾನೆ ಚಪ್ಪಾಳೆ? ಹನುಮಂತ ಯಾರ ತಂಟೆಗೂ ಹೋಗುತ್ತಿರಲಿಲ್ಲ. ಆದರೂ ಅವನು ನೆಮ್ಮದಿಯಾಗಿ ಒಂದು ದಿನವೂ ಬಸ್ಸು ಹತ್ತಿ ಕುಳಿತಿರಲಿಲ್ಲ. ಎಂಥ ಹೊಳೆ ಹೊಳೆವ ಹೊಸ ಕಾಸುಗಳನ್ನೇ ಅವನು ಕಂಡಕ್ಟರ ಕೈಗೆ ಕೊಟ್ಟರೂ, ಬೇರೆ ಕಾಸು ಕೊಡಿ ಅಂತ ಆತ ಸವಕಲು ಕಾಸನ್ನು ಹಿಂದಕ್ಕೆ ಕೊಡುತ್ತಿದ್ದ! ಹನುಮಂತನಿಗೆ ಕೊಟ್ಟು ಬದಲಾಯಿಸಬಹುದೆಂಬ ಭರವಸೆಯ ಮೇಲೆ ಅವರು ಕುರುಡು ಕಾಸುಗಳನ್ನು ಶೇಖರಿಸಿರುತ್ತಾರೆ ಅಂತ್ಯತೋರು ತ್ತದೆ. ಇತರರು ಮಾಡಿದ ಮೋಸಕ್ಕೆಲ್ಲ ಹನುಮಂತನೇ ಹೊಣೆ! ದುಷ್ಟರ ಹತ್ತಿರ ಸತ್ಯಕ್ಕೆ ಸೋಲುಸಿದ್ಧ. ಆದ್ದರಿಂದ, ಹನುಮಂತನೂ ಕೂಡ ಹಠ ಹಿಡಿಯದೆ ಅದನ್ನ ತೆಗೆದುಕೊಂಡು ಬೇರೆ ಕಾಸನ್ನು ಕೊಟ್ಟುಬಿಡುವನು, ಅಥವಾ ಬೇರೆ ಕಾಸಿಲ್ಲವಾದರೆ ಬಸ್ಸನ್ನು ನಿಲ್ಲಿಸಿ ಇಳಿದೇ ಹೋಗುವನು. ಆದರೆ, ಅವನನ್ನು ಬಸ್ಸಿನವರು ಅಷ್ಟಕ್ಕೇ ಬಿಡುತ್ತಿರಲಿಲ್ಲ. ಡ್ರೈವರಾದಿಯಾಗಿ ಗಾಡಿಯಲ್ಲಿನ ಮಹನೀಯರು ಮಹಿಳೆಯರೂ ಅವನನ್ನು ಬಹುವಾಗಿ ಹೀಯಾಳಿಸುವರು. ದುರುಗುಟ್ಟುತ್ತಾ ನೋಡಿ ಅವನ ಮೇಲೆ ರೇಗಿ ಬೀಳುವರು. "ಹೇಗಿದೆ ಆಸಾಮಿ ಮಾಡಿದ ತಂತ್ರ?" "ಬಡವರ ಹೊಟ್ಟೆಯ ಮೇಲೆ ಬಡಿಯುತ್ತಾರಲ್ಲಾ ಹೀಗೆ!" "ಪಾಪ! ಆ ಹುಡುಗ ಕೊಂಚ ಬೇಹುಷಾರಾಗಿ ದ್ದಿದ್ದರೆ ಗತಿ ಏನು?" "ತ್ಸು....ತ್ಸು....ತ್ಸು.... ಕಾಸಿಲ್ಲದಿದ್ದರೆ ನಡೆದುಕೊಂಡು ಹೋಗ ಬೇಕು. ಕುರುಡು ಕೊಡುವುದೇ ಏನನ್ಯಾಯ, ಅಂದರೆ,...." "ಇದಕ್ಕಿಂತ ನಾಲ್ಕು ಮನೆ ನಿತ್ಯಯಾತ್ರೆ ಮಾಡಬಾರದೇನ್ರಿ?" ಎಂಬ ಅವರ ಆಶೀರ್ವಾದ ಪರಂಪರೆಯು ನಡುವೆ ಹನುಮಂತ ಚೀಲ ಛತ್ರ ಸಮೇತನಾಗಿ ನಡುನಡುಗುತ್ತಾ ಇಳಿಯುವನು. ಚಿನ್ನದಂತ ಮನುಷ್ಯನನ್ನ ಛೀಮಾರಿಯಾಗಿ ಮಾಡಿಸುತ್ತದೆ ಹಾಳು ಮುಖ! ಒಳಗಿನ ಕೋಪವನ್ನು ಅದು ಸಂಪೂರ್ಣ ಮುಚ್ಚಿಬಿಡುತ್ತದೆ; ಹೊರ ಸೂಸುವುದೇ ಇಲ್ಲನ ಕೋಪ, ವ್ಯಸನ, ಕ್ರೌರ್ಯ ಕುದಿತ, ಹಿಗ್ಗು ತಗ್ಗು, ಯಾವುದನ್ನೂ ಹನುಮಂತ ಮುಖ ಹೊರಕ್ಕೆ ಕಾಣಿಸುವುದೇ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಅವನದು ಮುಖವೇ ಅಲ್ಲ. ಮುಖವಾಡ!

ಹೀಗಾಗಿ ಹನುಮಂತ ಈಚೆಗೆ ಮಾರ್ಕೆಟ್ಟಿಗೆ ಮಾತ್ರವೇ ಅಲ್ಲ, ಎಲ್ಲಿಗೂ ಬಸ್ಸಿನಲ್ಲಿ ಓಡಾಡುವುದೇ ಇಲ್ಲ. ದೇವರು ಕೊಟ್ಟ ಹಾಗೆ ಕಾಲುಗಳಿವೆಯಲ್ಲಾ, ಅನ್ನುತ್ತಾ, ಕೆಲಗಾಲಿನ ಹಿಮ್ಮಡಿಯಲ್ಲಿ ಬೆಳೆದಿರುವ ಎರಡು ಕಲ್ಲೊತ್ತುಗಳನ್ನೂ ಲೆಕ್ಕಿಸದೆ, ಕುಂಟುತ್ತಾ ಕುಪ್ಪಳಿಸುತ್ತಾ ಓ ಲಕ್ಷ್ಮಣಾ ಅಂತ ನಡೆದೇ ಹೋಗುತ್ತಾನೆ. ಆದರೆ, ಅವನ ಮುಖವನ್ನ ಎಲ್ಲೂ ಇಟ್ಟು ಹೋಗುವ ಹಾಗಿಲ್ಲ. ಅದರ ರೂಪನ್ನು ತಿದ್ದುವುದೂ ಅಸಾಧ್ಯ. ಗಡ್ಡ ಮೀಸೆಗಳ ಆಗು ಹೋಗುಗಳಿಂದ ಅವನ ಮುಖಕ್ಕೆ ಯಾವ ಲಾಭ ನಷ್ಟಗಳೂ ಆಗುವುದಿಲ್ಲವೆಂದು ಹನುಮಂತನಿಗೆ ಅನುಭವವಾಗಿದೆ. ಏನು ಮಾಡಿದರೂ, ಯಾವುದನ್ನ ಮಾಡದೆ ಇದ್ದರೂ, ದಾರಿಯುದ್ದಕ್ಕೂ ಹನುಮಂತನನ್ನ ಪೀಡಿಸುವುದನ್ನು ಮಾತ್ರ ಜನರು ಬಿಡಲಿಲ್ಲ. ಗಂಟೆ ಎಷ್ಟು ಎಂದು ಕೇಳುವ ತೊಪ್ಪೆ ಎತ್ತುವ ಹುಡುಗನಿಂದ ಹಿಡಿದು ಅಮ್ಮಾಸೆ ಯಾವತ್ತು ಎಂದು ವಿಚಾರಿಸುವ ಮುದುಕಯ್ಯನವರೆಗೂ ಪ್ರತಿಯೊಬ್ಬರ ಪ್ರಶ್ನೆಗೂ ಹನುಮಂತನೇ ಉತ್ತರಕೊಡಬೇಕು. "ಸ್ವಾಮಿ ! ಚಿನ್ನೇಗೌಡನ ಕೊಪ್ಪಲು ಯಾವುದು ?" "ಬುದ್ಧಿ, ಬೆಣ್ಣೆಧಾರಣೆ ಹೇಗೆ ಈಗ?" "ಅಮ್ಮಲ್‌ದಾರರು ಯಾವಾಗ ಬಿಜಯಮಾಡುತ್ತಾರೆ ಈ ಊರಿಗೆ?" "ಕೊಂಚ ನಶ್ಯವಿದ್ದರೆ ಕೊಡಿ ಸ್ವಾಮಿ'' "ಇಂಚ್‌ಪೆಟ್ರು ಮನೆಯಲ್ಲಿ ಅಡಿಗೆ ಮಾಡುತ್ತಿದ್ದರಲ್ಲಾ ಪೋಲೀಸಪ್ಪನವರು, ಅವರ ತಮ್ಮನೇನು ತಾವು ?"-ಹೀಗೆ ಹನುಮಂತನನ್ನ ಅನೇಕರು ಅನೇಕರೀತಿಯಾಗಿ ಕಾಡಿಸಿಯೇ ಕಾಡಿಸುವರು.

ಹನುಮಂತನಿಗೆ ಹೊರಗಂತೂ ಮನ್ನಣೆಯಿಲ್ಲ; ಮನೆಯಲ್ಲೂ ಅಷ್ಟಷ್ಟೆ ! ಹೊತ್ತು ಹೊತ್ತಿಗೆ ಹೊಟ್ಟೆಗೇನೊ ಬೀಳುತ್ತದೆ. ಜುಲ್ಮಾನೆ ಜಾತಾ ತಿಂಗಳು ತಿಂಗಳಿಗೂ ೩೭, ೩೮ ರೂಪಾಯಿಗಳನ್ನು ಖಜಾಂಚಿಯಾದ ಆಕೆ ಕೈಯಲ್ಲಿಟ್ಟು ಕೈಮುಗಿದು ಬಿಡುತ್ತಾನೆ. ಆಕೆ ಹಾಕಿದ ಹಿಟ್ಟೇ ಹಾಲುಖೀರು ಅಂತ ಅವನು ಪರಿಗಣಿಸುತ್ತಾನೆ. ಮಕ್ಕಳೇನಾದರೂ ಚೇಷ್ಟೆ ಮಾಡಿದರೆ- ಅವನ ಮುಖದ ಮಹಿಮೆ ಅಂದರೆ ಅದು ! -'ಲ್ರೋ ! ಸುಮ್ಮನಿರುತ್ತೀರೋ, ಅಮ್ಮನಿಗೆ ಹೇಳಲೋ' ಅಂತ ಗದರಿಸುತ್ತಾನೆ. ಯಾರಾದರೂ ಮನೆಗೆ ಬಂದಾಗ, ಕಂಬದ ಹಾಗೆ ಬಾಗಲ ಮುಂದೆನೇ ನೆಟ್ಟು ಕೊಂಡಿದ್ದರೂ ಕೂಡ, "ಬುದ್ಧಿಯವರಿದಾರೋ ಮನೆಯಲ್ಲಿ ?" ಅಂತ ಅವರು ಅವನನ್ನೇ ಕೇಳುತ್ತಾರೆ ! ಇದನ್ನರಿತು ಈಚೆಗೆ ಹನುಮಂತನೇ ಸ್ವತಃ, "ಹೋಗಿರಪ್ಪ ! ರಾಯರಿಲ್ಲ ಮನೆಯಲ್ಲಿ" ಎಂದು ಭಿಕ್ಷುಕರನ್ನೂ ಇನ್ಷೂರನ್ಸ್ ಏಜಂಟರುಗಳನ್ನೂ ಹೇಳಿ ಕಳುಹಿಸುತ್ತಿರುವನು!

ಇಂಥ ಅಪಮಾನಗಳನ್ನೂ ಪಿಡುಗುಗಳನ್ನೂ. ಹನುಮಂತ ಅನಾಯಾಸವಾಗಿ ಸಹಿಸ ಬಲ್ಲನು. ಆದರೆ, ಅವನೇ ನನಗೆ ಹೇಳಿದ ಹಾಗೆ ಎರಡು ಸಲ ಅವನಿಗೆ ತುಂಬಾ ಮನ ನೊಂದಿತಂತೆ. ಹಾಳು ಮುಖವನ್ನು ಪರಚಿಕೊಂಡು ಬಿಡೋಣ, ಮೊಂಡು ಮೂಗನ್ನು ಕುಯ್ದುಹಾಕಿ ಕೊಂಡು ತಿರುಗೋಣ ವೆಂದೆನಿಸಿತಂತೆ ! ಯಾರೋ ಒಬ್ಬಾಕೆ ಚಿನ್ನರಾಯ ಪಟ್ಟಣದ ಬಸ್ಸು ಸ್ಟಾಂಡಲ್ಲಿ 'ರೀ ! ನೀವು ಮುಳ್ಳ ಶಾಸ್ತ್ರಿಗಳ ಮಕ್ಕಳಲ್ಲವೇನ್ರಿ" ಅಂದಾಗ ಕೂಡ ಅವನಿಗೆ ಹಾಗನ್ನಿಸಲಿಲ್ಲವಂತೆ.

ಸುಮ್ಮನೆ ತಲೆ ತಗ್ಗಿಸಿಕೊಂಡು ಹಿಂದಿನ ಸೀಟದಲ್ಲಿ ಕುಳಿತು ಬಿಟ್ಟನಂತೆ. ಆದರೆ, ಮೊನ್ನೆ ಸ್ಟೇಷನಿಂದ ಊರಿಗೆ ಬರುವಾಗ ಯಾವನೋ ಒಬ್ಬ ಹುಡುಗ, ಕೇವಲ ಹತ್ತು ವರ್ಷದ ಹೈದ, ''ಅಣ್ಣಾ ! ನೋಡಲ್ಲಿ ! ಗಾಂಪರೊಡೇರು !'' ಎಂದು ಹನುಮಂತನ ಕಡೆ ಬೆರಳು ತೋರಿಸಿದಾಗ ಅವನ ಸಹನೆ ಮಿತಿಮೀರಿತಂತೆ ! ಹಾಗೆಯೇ ತನ್ನ ಮುಖದ ಮೇಲಿನ ಮುದ್ರೆಯನ್ನು ಹಸುಳೆ ತನವೆಂದು ಮೋಸಹೋಗಿ ಯಾವನೋ ಒಬ್ಬ ಕಡಲೆ ಕಾಯಿ ಮಾರುವವನು, "ಕಳ್ಳೇಕಾಯಿ ! ಕಳ್ಳೇಕಾಯಿ ! ಗರಂಗರಂ ಕಳ್ಳೇಕಾಯಿ ! ತಿಂದುನೋಡು, ಮಗಾ !" ಎಂದು ಹೇಳಿ ಒಂದು ಹಿಡಿಯನ್ನು ತಂದು ಹನುಮಂತನ ತುದಿ ಮೂಗಿಗೆ ತಗುಲಿಸಿದಾಗ ಅವನಿಗೆ ಜೀವನವೇ ಕ್ಷಣಮಾತ್ರ ವಿಷಮಯವಾಗಿ ಕಾಣಿಸಿತಂತೆ !

ಪಾಪ ! ಇಂಥ ಮುಖದ ಹಿಂದೆ ನಡೆಯುತ್ತಾ ಅವನ್ನು ಸದಾ ಹೊತ್ತು ತಿರುಗುವ ಹನುಮಂತನಿಗೆ ವಾಚಕರು ಮರುಗುವುದಾದರೆ, ಅವರು ಅವನಿಗೆ ಒಂದು ರೀತಿಯಾಗಿ ಉಪಕಾರ ಮಾಡಬಹುದಾಗಿದೆ. ''ಹದಿನಾರಾಣೆ ಬೆಪ್ಪ'', "ಹುಟ್ಟು ಮುದುಕ'' ''ನಿಶ್ಚೇತನ ಸ್ವರೂಪಿ'' ಎಂದು ಅನ್ನಿಸಬೇಕಾದ ವ್ಯಕ್ತಿ ಯಾವ ಸಿನಿಮಾ ಕಂಪನಿಗಾದರೂ ಬೇಕಿದ್ದರೆ, ನೀವು ನನಗೆ ಕೂಡಲೇ ತಿಳಿಸಿ, ನೀವು ಕೊಟ್ಟ ವಿಳಾಸಕ್ಕೆ ನಾನು ಹನುಮಂತನನ್ನ ಕಳುಹಿಸಿಕೊಡುತ್ತೇನೆ. ಆದರೆ ಸಿನಿಮಾ ತೆಗೆಯುವಾಗ ಒಂದೇ ಒಂದೆಚ್ಚರಿಕೆ ! "ಕ್ಲೋಸ್ ಅಪ್" ಎಂಬ ''ಹತ್ರಚಿತ್ರ''ವನ್ನು ಮಾತ್ರ ತೆಗೆದು ತೋರಿಸಬಾರದೆಂದು ಕಂಪನಿಯವರಿಗೆ ಹೇಳಬೇಕು.

—ನಾ. ಕ.

ಕತೆಗೆ ಕಾಲಿಲ್ಲ ಕೇಸಿಗೆ ಮುಕ್ತಾಯವಿಲ್ಲ.

* * *

ರಾತ್ರಿ ಕಂಡ ಜೈಲಿನಲ್ಲಿ ಹಗಲು ಹೋಗಿ ಸಿಕ್ಕಿಹಾಕಿಕೊಂಡ.

* * *

ಜಡ್ಜಿ ಶ್ಯೈಯೆಲ್ಲಾ ಬಂಗಾರ-ಕಿವಿ ಮಾತ್ರ ಹಿತ್ತಾಳೆ.

* * *

ಲಾಯರ ಕಣ್ಣುಕುರುಡಾದರೆ ಬಾಯ್ಕುರುಡೇ ರಂಗ !

* * *

ಲಾಯದಿಂದ ಲಾಯರು ಬರುವುದಾದರೆ.
ಸಾಕ್ಷಿ ಹೇಳಿದೆಲ್ಲಾ ಸತ್ಯ.

* * *

ಎಂಟು ವರ್ಷಕ್ಕೆ ನಮ್ಮಗಂಟು—ದಂಟು—

* * *

ಬುಡು ಬುಡುಕೆ ಲಾಯರಿಗೆ ತಲೆಯೆಲ್ಲಾ ಹರಟೆ.

“ಗಗ್ಗಯ್ಯ”—ವಿಮರ್ಶೆ

●

ಗಗ್ಗಯ್ಯನ ಗಡಿಬಿಡಿ ಮತ್ತು ಇತರ ಪ್ರಹಸನಗಳು :
ಬರೆದವರು, ನಾ. ಕಸ್ತೂರಿ, ಎಂ.ಎ., ಬಿ.ಎಲ್. [illegible], ಪ್ರಕಾಶಕರು : ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು, ಮೈಸೂರು, ೧೯೪೨. ಕ್ರೌನ್ ಅಷ್ಟ ಪುಟ v + ೧೧೫; ೪ ಚಿತ್ರಗಳು ಸಹಿತ. ಬೆಲೆ ಒಂದೂಕಾಲು ರೂಪಾಯಿ.

ಈ ಗ್ರಂಥದ ಹೆಸರಿನಲ್ಲಿ ಸೂಚಿಸಿರುವಂತೆ ಇದರಲ್ಲಿ ಗಗ್ಗಯ್ಯನ ಗಡಿಬಿಡಿ ಎಂಬ ಪ್ರಹಸನವೂ ‘ಮತ್ತು’ ಅಂದರೆ ವರಪರೀಕ್ಷೆ’, ‘ಇತರ’ ಅಂದರೆ ‘ಕಾಡಾನೆ ಎಂಬ ಇನ್ನೆರಡು ನಾಟಕಗಳೂ ಅಚ್ಚಾಗಿವೆ. ಮುದ್ರಣ ಕೆಲಸ ಬಹು ಅಂದವಾಗಿದೆ. ಮೊದಲನೆಯ ಹಾಗೂ ಕೊನೆಯ ನಾಟಕಗಳನ್ನು ಅಚ್ಚು ಮಾಡುವಾಗ [ ] ಎಂಬ ಆವರಣ ಚಿಹ್ನೆಯನ್ನೂ ನಡುವಣ ನಾಟಕದಲ್ಲಿ ( ) ಎಂಬ ಚಿಹ್ನೆಯನ್ನೂ ಉಪಯೋಗಿಸಿರುವುದು ವೈವಿಧ್ಯದ ದೃಷ್ಟಿಯಿಂದ ಶ್ಲಾಘನೀಯವಾಗಿದೆ. ಗ್ರಂಥಕರ್ತರು ತಮ್ಮ ಅರಿಕೆಯಲ್ಲಿ ಹೇಳಿಕೊಂಡಿರುವಂತೆ ೨೨ ವರ್ಷದ ಉಪಾಧ್ಯಾಯ ವೃತ್ತಿಯಿಂದ ಈಗ ತಾನೆ ನಿವೃತ್ತಿ ಹೊಂದಿರುವರಾದರೂ ಇನ್ನೂ ಅವರಲ್ಲಿ ನೀತಿ ಬೋಧಕ ಬುದ್ಧಿ ನೆಲೆಗೊಂಡಿದೆ ಎಂಬುದಕ್ಕೆ ಈ ನಾಟಕಗಳೇ ಸಾಕ್ಷಿ. ಜನ ಸಮುದಾಯಕ್ಕೆ ಅತ್ಯಗತ್ಯವಾದ ಅನೇಕ ಬುದ್ಧಿವಾದಗಳನ್ನು ಅವರು ರಂಗಸ್ಥಳದ ನಟರಿಂದಲೇ ಹೊರಡಿಸಿದ್ದಾರೆ. ಆದರೆ, ಮೊದಲನೆಯ ನಾಟಕದ ಕಡೆಯಲ್ಲಿ “ಆದ್ದರಿಂದ ಪರಸ್ಥಳಕ್ಕೆ ಪ್ರಯಾಣ ಮಾಡುವಾಗ ಪರಮ ಹುಷಾರಿ” ಎಂದೂ, ಎರಡನೆಯದರ ಕಡೆಯಲ್ಲಿ “ಆದ್ದರಿಂದ ವರನು ಪರೀಕ್ಷೆಗೆ ಒಪ್ಪಿಕೊಳ್ಳದಿರುವುದೇ ಮೇಲು” ಎಂದೂ ಕಡೆಯದರ ಕೊನೆಯಲ್ಲಿ “ಆದ್ದರಿಂದ ಫೌಂಟನ್ ಪೆನ್ನುಗಳನ್ನೇ ಬಳಸಿ ಶಾಯಿ ಕುಡಿಕೆಗಳನ್ನು ತ್ಯಜಿಸುವುದೇ ಮೇಲು” ಎಂದೂ ಮುದ್ರಿಸಿದ್ದರೆ ಓದುಗರಿಗೆ ಅನುಕೂಲವಾಗುತ್ತಿತ್ತು. ಈಗ, ಅವರೆಲ್ಲರೂ ಈ ಪ್ರಹಸನಗಳನ್ನು ಓದಿ ಆನಂದಿಸುವರೇ ಹೊರತು ಅವುಗಳ ಅಂತರಾಳದಲ್ಲಿ ಗ್ರಂಥಕರ್ತರು ಹುದುಗಿಸಿಟ್ಟಿರುವ ತತ್ವಗಳನ್ನು ಮನಗಾಣರು.

ಪ್ರಹಸನಗಳು ಚೆನ್ನಾಗಿವೆ; ನಮ್ಮನ್ನು ನಗುವಿನ ಲಹರಿಯಲ್ಲಿ ಮುಳುಗಿಸುತ್ತವೆ ಸರಿ. ಆದರೂ, ಗ್ರಂಥಕರ್ತರ ಭಾಷಾ ಜ್ಞಾನವು ನಮ್ಮನ್ನು ಅನೇಕ ಸಾರಿ ಅಚ್ಚರಿಗೊಳಿಸುತ್ತಿದೆ.

ವಿದ್ಯಾವಿಹೀನ ಸಂಪನ್ನರು (!) ಅಸಹ್ಯ ಮನುಭೋಕ್ತವ್ಯಂ (!) ದಂಡಂ ದಶ

ಮಣಂಭವೇತ್ (!) ಇತ್ಯಾದಿ ಪ್ರಯೋಗಗಳು ಜನ್ನರನ್ನಾದಿಗಳಲ್ಲೂ ಇಲ್ಲದೆ ಇರುವಾಗ, "ಕನ್ನಡಂ ಕತ್ತುರಿಯಲ್ತೆ" ಎಂಬ ಆರ್ಯೋಕ್ತಿಯೊಂದನ್ನೇ ಆಧಾರವಾಗಿಟ್ಟುಕೊಂಡು ಗ್ರಂಥಕರ್ತರು ಇಷ್ಟೊಂದು ಸ್ವಾತಂತ್ರ್ಯ ವಹಿಸಿರುವುದು ಅಕ್ಷಮ್ಯವೆಂದು ಹೇಳಿದರೆ ಯಾರೂ ನಮ್ಮ ಮೇಲೆ ರೇಗಿ ಬೀಳುವುದಿಲ್ಲವೆಂದು ಧೈರ್ಯದಿಂದ ಹೇಳುತ್ತೇವೆ. ಅಂದರೆ ನಮ್ಮ ಮಾತಿನಲ್ಲಿ ಕೊಂಚವೂ ಅತಿಶಯೋಕ್ತಿ ಇಲ್ಲವೆಂದು ಬೇರೆ ಹೇಳಬೇಕೇನು? ಅಲ್ಲದೆ, "ಆಡಿದವರ ಪಾಪ, ಮಾಡಿದವರ ಪುಣ್ಯ" "ಹತ್ತು ಜನರ ಮುಂದೆ ಅತ್ತರೆ ಸುಸ್ತಿಲ್ಲ ಪರಿಹಾರ" "ಗುಂಡು ಪಂಡಿತರ ಚೂರ್ಣ ತಿಂದು, ದಂಡಿಗೆ ಹೋಗೋಣ ಬಾ ಅಣ್ಣಾ" ಎಂಬ ಗಾದೆಗಳು "ಗಾಥಾ ಸಪ್ತಶತಿ"ಯಲ್ಲೂ ಇಲ್ಲದೆ ಇರುವಾಗ, ಕಸ್ತೂರಿಗಳು ಮಾತ್ರ ಅವುಗಳನ್ನು ನಿಸ್ಸಂಕೋಚವಾಗಿ ಉಪಯೋಗಿಸುತ್ತಿರುವುದು ಯಾವ ದೇವರ ಪ್ರೀತಿಗಾಗಿ ಎಂದು, ಅವರು ಉತ್ತರ ಕೊಡಲಿ ಕೊಡದೇ ಇರಲಿ, ನಾವು ಕೇಳಬೇಕಾಗುತ್ತದೆ. ಈ ನಾಟಕಗಳನ್ನು ಓದಿದ ಮೇಲೆ ಗ್ರಂಥಕರ್ತರನ್ನು ಕೆಲವು ಪ್ರಶ್ನೆಗಳು ಕೇಳಬೇಕೆಂದೂ ನಮಗನ್ನಿಸಿದೆ.

ಪಂಚಮಹಾಪಾತಕಗಳಲ್ಲಿ
ಚಾಡಿಯೂ ಒಂದೇ?
ತಾಟಕಿಗೆ ಮದುವೆಯಾಗಿತ್ತೆ?
ಗರವರು ಅಂದರೆ ಯಾರು?
ಸತಿವ್ರತಾ ಚೂಡಾಮಣಿಗಳು
ಯಾರು ಯಾರು?
ಬಡಕಲು ಪೆಡಂಭೂತ ಹೇಗಿರುತ್ತದೆ?
ಮಂಡಿಗಳಿಗೆ ಮಾತ್ರ ಮಲೇರಿಯಾ
ತಗಲುತ್ತದೆಯೇ?

ಈ ನಾಟಕಗಳನ್ನು ರಂಗಸ್ಥಳದ ಮೇಲೆ ನೋಡಿದರೆ, ಇಂತಹ ನೂರಾರು ಪ್ರಶ್ನೆಗಳು ನಮ್ಮ ಮೆದುಳನ್ನು ಕದಡಿಸುತ್ತವೆ. ನಮ್ಮದಿನ್ನೊಂದು ಸೂಚನೆ. ಮುಂದಿನ ಮುದ್ರಣ ಕಾಲದಲ್ಲಿ ಇದಕ್ಕೆ ಗಮನ ಕೊಟ್ಟರೆ ಒಳ್ಳೆಯದು. ಚಲ್ ಚಲ್‌ರೆ ನೌಜವಾನ್ ಎಂಬ ಹಾಡನ್ನು ನಟರು ಹಾಡುವಾಗ ತೆಗೆದು ಅಚ್ಚು ಹಾಕಿಸಿರುವ ಮನಮೋಹಕ ಚಿತ್ರದಲ್ಲಿ ವರನ ತಂದೆಯ ಬಾಯನ್ನು ಇನ್ನೂ ಕೊಂಚ ಅಗಲಿಸಿದರೆ ಹೇಳುತ್ತಿರುವ ಹಾಡು ಸ್ಪಷ್ಟವಾಗಿ ಕೇಳಿಬರುತ್ತದೆ.

"**ಕನ್ನಡಂ**"

ಬಾಲ್ಯದ ಕೊರಗು

ಶಾಮು, ರಾಮು, ಭೀಮು ಮೂವರೂ ರಜ ಮುಗಿದ ಮೇಲೆ ಬೆಂಗಳೂರಲ್ಲಿ ಪುನಃ ಸೇರಿದರು. ಪ್ರತಿಯೊಬ್ಬನಿಗೂ ಸುಮಾರು ೧೨ ವರ್ಷ ವಯಸ್ಸಿರಬಹುದು. ನಿನ್ನೆ ಬೆಳಗ್ಗೆ ಮೂವರೂ ಮಾತಾಡುತ್ತಿದ್ದಾಗ,

'ಆರ್ಕೆಸ್ಟ್ರಾ (Orchestra) ಅಂದರೇನು ?' ಎಂದು ಶಾಮು ಕೇಳಿದ.

ರಾಮು—'ಗೊತ್ತಿಲ್ಲ. ಏಕೆ ?'

ಶಾಮು—'ಇವತ್ತು ಸಂಜೆ ಅದಿದೆಯಂತೆ ಪುಟ್ಟಣ್ಣ ಚೆಟ್ಟಿ ಹಾಲ್‌ನಲ್ಲಿ, ನಮ್ಮ ತಂದೆ, "ಬಾ, ಹೋಗೋಣ. ಟಿಕೆಟ್ ತಂದಿದೀನಿ." ಅಂದರು. ಅದೆಂಥಾದೊ ಕಾಣೆನಲ್ಲ.'

ಭೀಮು—'ಅದೊಂದು ತರ ಹಕ್ಕಿ ಕಣೊ. ಮರಳು ಕಾಡಿನಲ್ಲಿರುತ್ತೆ. ನಾನು ಮೈಸೂರು ಜೂಲಿ ನೋಡಿದೆ. ಭೂತಗನ್ನಡಿಯಲ್ಲಿ ನೋಡಿದ ಕೋಳಿಯ ಹಾಗಿರುತ್ತೆ, ಅಷ್ಟೆ. ಊರಲ್ಲಿರುವ ನಮಗೇ ಬದಕುವುದು ಇಷ್ಟು ಕಷ್ಟವಾದರೆ, ಮರಳು ಕಾಡಿನಲ್ಲಿ ಹೇಗಿರುತ್ತವೊ ಅವು ಈಗ, ಪಾಪ. ಅಫುಲ್(awful)ಅಲ್ಲವೆ?

ಶಾಮು—ಹೋಗೊ. ಹಾಳಾಯಿತು. ಇವತ್ತು ಮ್ಯಾಟನಿಗೆ ಹೋಗುವುದನ್ನ ತಪ್ಪಿಸಿತಲ್ಲ ಆ ಕೋಳಿ. ಇದು ಅಫುಲ್; ನೀ ಹೇಳೀದ್ದಲ್ಲ; ....ಆ ಫುಲ್...... ಥುತ್.' ಎಂದು ಬಿರುಸಿನಿಂದ ಉಗುಳಿದ.

ಭೀಮು—'ನನಗೂ ಹೀಗೆ ಒಂದು ಸಲ ಆಯಿತು. ನಮಗೂ ಕೋಟೆಸ್ಕೂಲಿಗೂ ಮ್ಯಾಚಾದ ದಿನ ನನ್ನ ಚಿಕ್ಕಪ್ಪ ನಾನು ಆಡುವುದನ್ನ ತಪ್ಪಿಸಿ ಯಾವುದೊ ಲೆಕ್ಚರಿಗೆ ಎಳೆದುಕೊಂಡು ಹೋದರು. ನನ್ನ ಹೆಸರಿಗೆ ಒಂದೆರಡು ಗೋಲ್ ಹಾಕಿ ಕೊಳ್ಳುವುದಕ್ಕೆ ಚಕ್ಕರ್ ಬಿತ್ತು. ಯಾರಿಗೆ ಬೇಕಾಗಿತ್ತು ಆ ಲೆಕ್ಚರ್. ದೊಡ್ಡೋರೆಲ್ಲ ರಾಯರ ಕುದುರೇನೆ. ಈಗ ನಮ್ಮ ಟೀಂ ನಲ್ಲಿ ನನ್ನ ಜಾಗಕ್ಕೇ ಚಕ್ಕರ್. ಅಫುಲ್; ಹ್ಹು; ಅಫುಲ್.' ಎನ್ನುತ್ತಾ ಫುಟ್ ಪಾತಿನ ಮಣ್ಣನ್ನೊದ್ದ.

ರಾಮು—'ಅದೇನು ಮಹಾ ! ಮೊನ್ನೆ ನಮ್ಮೂರಿಗೆ ಹೋಗಿದ್ದಾಗ ನನ್ನ ಪ್ರಾಣ ಕಳೆದು ಕೊಳ್ಳುವವರೆಗೂ ಬಂದಿತ್ತು. ಒಂದು ದಿನ ಮನೆ ಮುಂದೆ ಬಚ್ಚ ಆಡುತ್ತಿದ್ದೆ. ಯಾರೊ ಬಂದು, "ನಿಮ್ಮ ತಂದೆ ಇದಾರೇನಯ್ಯ ?" ಅಂದ. ಅವನ್ನ ನಮ್ಮ ತಂದೆಯವರ ಹತ್ತಿರ ಬಿಟ್ಟು ಹಾಗೇ ಹೊಂಚು ಕೇಳಿದೆ. "ಸ್ವಾಮಿ, ನಿಮ್ಮ ಮಗನಿಗೆ ರಜದಲ್ಲಿ ಪಾಠ ಹೇಳಿಸುವುದಾದರೆ--" ಅಂತ ಪುರಾಣ ಬಿಚ್ಚಿದ '

ಶಾಮು ಭೀಮು ಇಬ್ಬರೂ ಸ್ವಲ್ಪ ಹೊತ್ತು ಮಂತ್ರ ಹಾಕಿದವರಂತೆ ಮೂಕರಾಗಿದ್ದು, ಆ ಮೇಲೆ, "—ಮಗ" ಎಂದು, ರಾಮುಗೆ ಸಹಾನುಭೂತಿ ತೋರಿದರು.

ಬಿ. ಚಂ.

ಅಣ್ಣಯ್ಯ

ಆಗತಾನೆ ಅಣ್ಣಯ್ಯನ ಮೇಷ್ಟ್ರು ಅಪನನ್ನ ಬಾಯಿತುಂಬ ಹೊಗಳಿ ನನ್ನಿಂದ ಐದು ರೂಪಾಯಿ ಸಾಲ ವಸೂಲಿ ಮಾಡಿಕೊಂಡು ಮೆಟ್ಟಲಿಳಿದಿದ್ದರು. ಸ್ಕೂಲಲ್ಲಿ ಅಣ್ಣಯ್ಯನಂತಹ ಬೃಹಸ್ಪತಿಗಳೇ ಇಲ್ಲವಂತೆ. ಅವನ ಬರೆವಣಿಗೆಗೆ ಕಣ್ಣು ಮುಚ್ಚಿಕೊಂಡು ನಂಬರು ಕೊಡಬಹುದಂತೆ. ಲೆಕ್ಕದಲ್ಲಿ ಬೇರೊಬ್ಬರಿಗೂ ಅಣ್ಣಯ್ಯನಷ್ಟು ಉತ್ತರಗಳು ಬರುವುದೇ ಇಲ್ಲವಂತೆ; ಪ್ರತಿಯೊಂದು ಲೆಕ್ಕಕ್ಕೂ ಮೂರು ನಾಲ್ಕು ಉತ್ತರಗಳು! ಭೂಗೋಳವನ್ನೇ ತಲೆ ಕೆಳಕು ಮಾಡಿ, ಕನ್ನಡ ಪದಗಳಿಗೆ ಹೊಸ ಹೊಸ ಅರ್ಥಗಳನ್ನು ಕಟ್ಟಿ, ಇಂಗ್ಲೀಷು ಭಾಷೆಗೆ ಚಿತ್ರಹಿಂಸೆ ಮಾಡಿ, ಅಣ್ಣಯ್ಯ ವೀರ ವಿದ್ಯಾರ್ಥಿ ಎನಿಸಿಕೊಂಡಿರುವನಂತೆ. "ಕೇಳ ಬೇಕೆ? ಸಿಂಹದ ಮೊಟ್ಟೆ, ಸಿಂಹದ ಮರಿ" ಎಂದು ಅವರು ನನ್ನನ್ನೂ ಹಿಗ್ಗಿಸಿ ಐದುರೂಪಾಯಿ ನೋಟು ಸಂಪಾದಿಸಿ ಬಿಟ್ಟರು. ಎರಡು ತಿಂಗಳು ಅಣ್ಣಯ್ಯನಿಗೆ ಪಾಠ ಹೇಳಿ ಸಾಲ ತೀರಿಸಿ ಬಿಡಿ ಅಂದರೆ ಅಣ್ಣಯ್ಯನಂತಹ ಅಗ್ರಗಣ್ಯನಿಗೆ ಟ್ಯೂಷನೇ ಬೇಕಿಲ್ಲ ಅಂತ ಹೇಳಿ ಮೇಷ್ಟರು ಮೆಟ್ಟಲಿಳಿದರು.

ಟಪಾಲು ಟೈಮಿಗೆ ಇನ್ನೂ ಹತ್ತು ನಿಮಿಷ ಉಳಿದಿತ್ತು. ನಾನು ಲೇಖನಿಯನ್ನು ಹಿಡಿದು ಕುಳಿತೆ. ಕಥಾನಾಯಕನನ್ನು ಕಾರಂಜಿ ಕೆರೆಗೆ ತಳ್ಳುವ ಕೆಲಸ ಮಾತ್ರ ಉಳಿದಿತ್ತು. ಆತನ ಕತ್ತಿಗೆ ಕೈ ಕೊಡುವುದಕ್ಕೆ ಸರಿಯಾಗಿ ಅಣ್ಣಯ್ಯನೇ ಆವಿರ್ಭವಿಸಿದ. ಅಲ್ಲಿಂದಿಲ್ಲಿಗೆ ಓಡಾಡಿದ. ಒಂದು ಪಾತರಗಿತ್ತಿಯನ್ನು ಕೈಬೀಸಿ ಕರೆದ. ನೆಲದಮೇಲಿದ್ದ ಬಟ್ಟಲು ಬಸಿಗಳನ್ನುರುಳಿಸಿದ. "ಲೋ! ನೀನು ಇಲ್ಲಿ ನಿಂತಿದ್ದರೆ ನನ್ನ ಬರವಣಿಗೆ ಸಾಗುವುದಿಲ್ಲ. ಕೊಂಚಹೊತ್ತು ಮರೆಯಲ್ಲೇ ಇರು. ಇದನ್ನ ಮಡಿಸಿ ಲಕ್ಕೋಟೆಯಲ್ಲಿಡುವಾಗ ನೀನೇ ಸ್ಟಾಂಪನ್ನೂವೇ ಲಕ್ಕೋಟೇನೂವೇ ನೆಕ್ಕುವಿಯಂತೆ, ಹೋಗು, ಜಾಣ" ಅಂದೆ.

ಸಿಂಹದ ಮರಿ ಪಾತರಗಿತ್ತಿಯನ್ನು ಬಿಟ್ಟು ಪಕ್ಕದ ಕೋಣೆಗೆ ಹೋಯಿತು. ಕಾರಂಜಿ ಕೆರೆಯಲ್ಲಿ 'ಘುಳುಂ' ಎಂದು ಸದ್ದಾಯಿತು. ನಾಲ್ಕು ನೀರು ಗುಳ್ಳೆಗಳು ನನ್ನ ಕಥೆಯ ಅಂತ್ಯವನ್ನು ಸೂಚಿಸಿದ್ದುವು. ಅಣ್ಣಯ್ಯ ಬಂದು ಆನಂದದಿಂದ ನೆಕ್ಕಿ ಅಂಟಿಸಿದ. "ನೀನೇ ಪೆಟ್ಟಿಗೆಯಲ್ಲಿ ಹಾಕಿಬಿಟ್ಟು ಬಾ!" ಎಂದೆ, ಆ ಹಸುಳೆಗೆ. ಅಣ್ಣಯ್ಯ ಅರಳಿದ ಕಣ್ಣುಗಳನ್ನ ನನ್ನ ಮೂತಿಯಕಡೆಗೆ ತಿರುಗಿಸಿ, "ಭಾವ! ಭಾವ! ಇದರೊಳಗಿಟ್ಟಿಯಲ್ಲಾ, ಕಾಗದ! ಅದು ಹಿಂದಕ್ಕೆ ಬಂದಾಗ ನನಗೆ ಕೊಡುತ್ತೀಯಾ?" ಎಂದ. "ಯಾಕೋ? ಕಥೆ ಓದಿಕೊ ಬೇಕೇನೋ?" ಅಂದೆ. "ಅಲ್ಲ! ಡಬ್ಬಲ್ ದೋಣಿ ಮಾಡಿಕೋತೀನೆ" ಎಂದು ಅಣ್ಣಯ್ಯ ಹೇಳಿದಾಗ, ನಿಜವಾಗಿಯೂ ಅವನು ಬೃಹಸ್ಪತಿಯೇ ಇರಬೇಕು, ಅಂದುಕೊಂಡೆ.

ಮಹಾನುಭಾವರುಗಳೊಡನೆ ಅತಿರಸ ನಿಮಿಷಗಳು

[೧೮ನೆಯ ಪುಟದಿಂದ]

ಬ್ಬರ ಕಿವಿಗೆ ಮುಟ್ಟಿತು. ಅಲ್ಲಿ ಅದು ಗಬ್ಬವಾಯಿತು.

ಎರಡು ವರ್ಷಗಳ ಬಳಿಕ-ನಮ್ಮ ಸಾಧುಮಿತ್ರರು ತಿರುಗಿ ನಮ್ಮ ಕವಿಮಿತ್ರರನ್ನು ಸಂಧಿಸಿದರು. ಶ್ರೀಯುತರೇ, ನೀವು ನಮ್ಮ ಗೆಳೆಯ ಕವಿವರ್ಯರು ಬರೆದ "ಸಾಗರ" ಎಂಬ ಕವನ ಓದಿಲ್ಲವೇ-ಎಂದು ಕೇಳಿದರು. 'ಇಲ್ಲ' ಎಂದುದರಿಂದ ಒಂದು ಪುನಃ ತರಿಸಿ ಅದನ್ನು ಓದಿದರು. 'ಚೆನ್ನಾಗಿದೆ'-ಎಂದರು.

''ಹೇಗಿದೆ ಐಡಿಯ''-ಎಂದು ಕೇಳಿದರು ಸಾಧುಗಳು.

''ತೀರ ಹೊಸತು" ಎಂದರು ಕವಿಮಿತ್ರರು.

ಒಬ್ಬ ಕವಿಯ ಭಾವನೆಯನ್ನು ಇನ್ನೊಬ್ಬ ಕವಿ 'ಗಬ್ಬ'ವಾಗಿರುವುದು ಹೊಸ ಐಡಿಯವಲ್ಲವೇ ?

೭

ನಮ್ಮ ಹುಡುಗತನದ ಕಾಲ. ಡಿಬೇಟಿಂಗ್ ಸ್ಪರ್ಧೆಗಳ ಕಾಲ. ನಾವೆಲ್ಲ ಭಾಗವಹಿಸಲು ಉತ್ಸುಕರಾದವರು. ನನ್ನ ಗೆಳೆಯನೊಬ್ಬನಿಗಂತು ತರ್ಕ ಸಭೆಯೆಂದರೆ ಪ್ರಾಣ.

ಒಂದು ವಾರದಲ್ಲಿ-ಚರ್ಚೆಯಾಯಿತು. "ಶಿವಾಜಿ ಶ್ರೇಷ್ಠನೇ, ಅಕ್ಬರನೇ''-ಎಂದು. ನಾನು ಶಿವಾಜಿಯ ಬಾಲ ಹಿಡಿದೆ. ಅವನು ಅಕ್ಬರನ ಬಾಲ ಹಿಡಿದನು; ವಾದಿಸಿ ಗೆದ್ದನು. ಅವನ ಪಂಗಡವೇ ಆ ದಿನ ಗೆದ್ದಿತು.

ಮರುವಾರ 'ಲೇಖನಿ ಶ್ರೇಷ್ಠವೋ, ಖಡ್ಗವೋ,' ಎಂದು ತರ್ಕವಾಯಿತು. ನಾನು ಲೇಖನಿಯ ದಾಸನಾದೆ. ಅವನು ಖಡ್ಗವನ್ನು ಹಿಡಿದ. ಆ ದಿನ ನನಗೂ ಮೇಲಾಗಿ ಅವನೇ ವಾದಿಸಿದನು. ಅವನು ಅರೆತಾಸಿನ ಪ್ರತಿವಾದನ ಭಾಷಣ ಮಾಡಿ, ವಾದದಲ್ಲಿ ನನ್ನನ್ನು ಮುಲಗಿಸಿ ವೇದಿಕೆಯಿಂದ ಇಳಿಯುವ ವೇಳೆಗೆ ''ಆದುದರಿಂದ ಶಿವಾಜಿಗಿಂತ ಅಕ್ಬರನೇ ದೊಡ್ಡವನೆಂದು ನಾನು ಸಿದ್ಧಪಡಿಸುತ್ತೇನೆಂದು ಹೇಳಿ, ಮೇಜನ್ನು ಬಡಿದು ಸ್ಥಳವನ್ನು ಸೇರಿದನು.

ಆದುದರಿಂದ-!"ಎಂದರು ಎಲ್ಲ.

"ನಂ ಯೂನಿಯನ್ ಎಲೆಕ್ಷನ್"

ಲಾವಣಿ

[ಲೇಖಕ: ಗ. ಸ. ಹಾಲಪ್ಪ, ಮಹಾರಾಜರವರ ಕಾಲೇಜು]

ಭಾಗ ೧

ಆದಿ ವಿಘ್ನೇಶನ-ಪಾದದಿ ನಮಿಸಿ-ಶೋಧಿಸಿ ಹೇಳುವೆ ಪದಪೂರ।
ಮಾದರಿ ಮೈಸೂರ್- ವಿದ್ಯಾರ್ಥಿ ಸಂಘದ-ಇಲೆಕ್ಷನ್ ಗಲಭೆಯ ಮಜಕೂರ॥
ಪ್ರಥಮದಿ ಪ್ರೆಸಿಡೆಂಟ್, ಪರ್ಮಿಷನ್ ಪಡೆಯದೆ, ಪದವನು ಪಾಡುವೆ ಪದಪಿಂದ।
ಹೊತ್ತಿನ ತುರ್ತಿಗೆ, ಆರ್ತಿಲಿ ರಚಿಸಿಹ, ಗತ್ತಿನ ಶಿಸ್ತಿನ ಪದಬಂಧ।
ಹತ್ಯಕಾಂಡದ ಕಂತೆಯಿದಲ್ಲವು, ಸತ್ಯದ ಸಂಗತಿ ಮೇಲಿಂದ।
ವಿಸ್ತರಿಸಿರುವೆನು, ಸತ್ಯದ ಕಥೆಯನು, ಉತ್ಪ್ರೇಕ್ಷೆಗೈಯುತ ಸರಸಿಂದ॥
ವಸ್ತುಪ್ರಕೃತಿಯೊಳು ಮಿಥ್ಯವಿದಲ್ಲವು ಸತ್ಯವು ಎಂಬುವ ತಿಳಿವಿಂದ।
ಶ್ರೋತೃಗಳೆಲ್ಲರು ಪ್ರೀತಿಯ ತೋರುತ ಕಿವಿಯನು ಕೊಡುವುದು ಒಲವಿಂದ॥

ದೊಡ್ಡ ಡ್ಯಾನ್

ವಿದ್ಯಾರ್ಥಿ ಸಂಘದ ಹುದ್ದೇದಾರರ ಆಯ್ಕೆಯ ಮಾಡುವ ಮನದೊಳಗೆ।
ಸ್ಪರ್ಧಿಸಲ್ ಬಯಸುವ ಸ್ಪರ್ಧಿಗಳೆಲ್ಲರು ಮುನ್ನವೆ ತಿಳಿಪುದು ಮಿತಿಯೊಳಗೆ॥
ಮುದ್ದಿನ ನಮ್ಮಯ ವಿದ್ಯಾರ್ಥಿ ವೃಂದಕೆ ಬಿನ್ನಪಗೈಯ್ಯಲು ಕ್ರಮದೊಳಗೆ।
ವಿದಾರ್ಥಿ ತರುಣರು ತಡವನು ಮಾಡದೆ ಹೆಸರನು ಕೊಟ್ಟರು ಭರದೊಳಗೆ॥

ಶ್ಲೋಕ

ನನ್ನಿಯಿಂ ಸದಸ್ಯ ಸ್ಥಾನಕೆ—ನೂರ ಏಳ್ಪುರಿಯಾಳುಗಳ್।
ಇನ್ನುಳಿದ ಸ್ಥಳಗಳಿಗೆ ಸ್ಪರ್ಧೆಗೈದರು ಹೇಳಲಾರದ ಹುರುಪಿನೊಳ್।

ಚಾಲ್

ಚೋದ್ಯವಿದಲ್ಲವು ಬೋಧಿಸಿ ಹೇಳುವೆ ಗತಿಸಿದ ಕಥನದ ವಿಚಾರ।
ಮಾದರಿ ಮೈಸೂರ್ ವಿದ್ಯಾರ್ಥಿ ಸಂಘದ ಎಲೆಕ್ಷನ್ ಗಲಭೆಯ ಮಜಕೂರ॥
ಎಲೆಕ್ಷನ್ ಗಲಭೆಯ ಉಲ್ಬಣ ಸ್ಥಿತಿಯನು ವರ್ಣನೆಗೈಯ್ಯಲು ನಿಮ್ಮಲ್ಲಿ।
ಹಲವು ಜಿಹ್ವೆಯ ಆದಿಶೇಷನಿಗು ಅಸಾಧ್ಯವಾಗಿದೆ ಸದ್ಯದಲಿ॥
ಎಲೆಕ್ಷನ್ ಗಲಭೆಯು ಉಲ್ಬಣಗೊಂಡಿತು ಓಟಿನ ಮನೆಯಾ ಎದುರಿನಲಿ।
ಬಲವನು ಮೀರಿ ಓಟಿಗೆ ಒದರುವ ಸೀಟಿಗರೆಲ್ಲರ ಕೂಟದಲಿ॥

ಎಲೆಕ್ಷನ್ ಗಲಭೆಯ ಉಲ್ಬಣ ಸ್ಥಿತಿಯನು ಮುನ್ನವೆ ನೆನೆದು ಮನದಲ್ಲಿ।
ಗಲಭೆಯಂ ಸಲಹಲು ಮಹಿಳೆಯರಿಗಾಗಿ ವ್ಯವಸ್ಥೆಗೈದರು ಮೊದಲಲ್ಲಿ॥

ದೊಡ್ಡ ಡಾನ್

ಬಾಲಕರಲ್ಲಿ ನಂಬುಗೆಯಿಲ್ಲದ ಸ್ಪರ್ಧಿಗಳ್ ಕೆಲವರು ಮನದಲ್ಲಿ।
ಬಲಯುತ ಕಾಲೇಜ್ ಬಾಲೆಯರೆಲ್ಲರ ವಿನಯದಿ ಬಂದು ಕಾಣುತಲಿ॥
ಲಲಾಮತನದಲಿ ಸಲಾಮು ಹೊಡೆಯುತ ಮತವನು ಬೇಡಿ ಅವರಲ್ಲಿ।
ಗೆಲ್ಲುವೆವೆನ್ನುವ ಧೈರ್ಯದಿ ನುಡಿದರು ವಿದ್ಯಾರ್ಥಿಗಳೆಲ್ಲರ ಎದುರಿನಲಿ॥

ಶ್ಲೋಕ

ನನಗೆ ನೀವು ಓಟು ಕೊಟ್ಟು ಕೃಪೆಯನು ಮಾಡುವುದೆನ್ನುತ।
ಬೆನ್ನು ತಟ್ಟಿ ಓಟು ಗಳಿಸುವ ಟ್ರ್ಯಾಕ್ಟಿಕ್ಸ್ ಎಲ್ಲವ ಬಳಸುತಾ॥

ಚಾಲ್

ನಿದ್ದೆಯಂ ಗಣಿಸದೆ ಸ್ಪರ್ಧಿಗಳ್ ಕೆಲವರು ಪ್ರಚಾರಗೈದರು ಭರಪೂರ।
ಮಾದರಿ ಮೈಸೂರು ವಿದ್ಯಾರ್ಥಿ ಸಂಘದ ಎಲೆಕ್ಷನ್ ಗಲಭೆಯ ಮಜಕೂರ॥

ಭಾಗ ೩

ಚುನಾಯ್ತರಾಗಿ ಗೆಲ್ಲುವ ಮೊದಲೊಳು ವಿನಯತೆ ತೋರ್ಪರು ಸ್ಪರ್ಧಿಗಳು
ಚುನವಣೆ ಮುಗಿದ ಮಾರನೆ ದಿನವೇ ಅಲ್ಲಿಗೆ ನಿಂತವು ಸಲಾಂಗಳು॥
ಚುನಾವಣೆ ನಡೆಯುವ ಮುನ್ನಿನ ದಿನದೊಳು ಸಲಾಮು ಮೇಲೆ ಸೆಲ್ಯೂಟುಗಳು।
ವಿನಯದ ಸೋಗಿಗೆ ಒಲಿಯದೆ ಇದ್ದರೆ ಮೇಲಿಂದ ಬರುವುವು ಪ್ರಾಮಿಸ್ಗಳು॥
ಘನ ಪ್ರಾಮಿಸ್ಸುಗಳಿಗೆ ಮನ್ನಣೆಸಿಗದೊಡೆ ಒಯ್ವರು 'ಅಯ್ಯರ ಭವನ'ದೊಳು।
ಕೊನೆಯೊಳು ಕೊಡಿಸುವರ್ ಮತವನು ಬೇಡುತ ನಾನಾ ಬಗೆಯ ತಿಂಡಿಗಳು॥

ದೊಡ್ಡ ಡಾನ್

ಏನೆಂದ್ಹೇಳಲಿ ಚುನವಣೆ ಕಾಲದಸಂಭ್ರಮ ಸಡಗರದೇರನ್ನು।
ಮನದೊಳು ಗೆಲ್ಲುವ ಯೋಚನೆಯಿಂದಲಿ ಯೋಚನೆ ಮಾಡುವ ಜನರನ್ನು॥
ಅನುಪಮದಿಂದಲಿ ವಿನಯವ ತೋರುತ ನಟನೆಯ ಮಾಡಿದ ಸೋಗನ್ನು।
ಬಣ್ಣಿಸಲಾಗದು ಕಣ್ಣಾಲಿ ನೋಡಿದ ನಾನಾ ರೀತಿಯ ಫ್ಯಾಷನ್ನು॥

ಶ್ಲೋಕ

ದಾರಿಯಲ್ಲಿಯು ಟಾರಿನಲ್ಲಿಯು ಪ್ರಕಟವಾದಾ ನಾಮಗಳ್।
ದಾರಿಹೋಕರ ಪಾದತಳದೊಳು ಪೂತವಾದುವು ಹೆಸರುಗಳ್॥

ಚಾಲ್

"ನಂ ಯೂನಿಯನ್ ಎಲೆಕ್ಷನ್"

ಬೋಧಿಸಿ ಹೇಳುವೆ ಸೋದರ ಸಖರಿಗೆ ಬಗೆ ಬಗೆ ರೀತಿಯ ಝೇಂಕಾರ।
ಮಾದರಿ ಮೈಸೂರ್ ವಿದ್ಯಾರ್ಥಿ ಸಂಘದ ಎಲೆಕ್ಷನ್ ಗಲಭೆಯ ಮಜಕೂರ॥

ಭಾಗ ೪

ಇಂಟರ್ ಮೀಡಿಯೆಟ್ ಓಟಿನ ಬೇಟೆಗೆ ಬಂಟರು ಹೊಂಟರು ನೋಡಲ್ಲಿ।
ನಂಟನು ಬೆಳೆಸುವ ವೇಳಾಪಟ್ಟಿಯ ಪ್ರಿಂಟಿಸಿ ಕೊಟ್ಟರು ಕರದಲ್ಲಿ॥
ಗಂಟೆಯು ಆಗುವ ಮುನ್ನವೆ ಅವರು ಹಂಟನು ಮಾಡುತ ಕ್ಲಾಸಲ್ಲಿ।
ಮೇಸ್ಟರ್ ಎಂಟರ್ ಆದರು ಅವರು ಪಂಟನು ಹೊಡೆವರು ತ್ವರೆಯಲ್ಲಿ॥
ಅಂಟಿಸಿ ಮೊದಲಿ ಓಟಿನ ಚೀಟಿಯ ಮರಗಳ ಗೋಡೆಯ ಬುಡದಲ್ಲಿ।
ರೆಸ್ಟಾರೆಂಟಿನ ಎಂಟು ದಿಕ್ಕಿಗೂ ಬೋರ್ಡನು ಬರೆಸಿ ಕಟ್ಟುತಲಿ॥
ಕಂಟೆಸ್ಟ್ ಮಾಡಿ ಸಕ್ಸೆಸ್ ಸಿಗದೊಡೆ ಎಂತಹ ಸೋಲು ಎನ್ನುತಲಿ।
ಪ್ರಿಂಟನು ಹೊಡೆಸುತ ಮುದ್ರಣಕಾರರ ಉದ್ಧಾರ ಗೈಯ್ದರು ಕೊನೆಯಲ್ಲಿ॥

ಶ್ಲೋಕ

ಎಷ್ಟು ಮಾಡಲಿ ಮುನ್ನತಾ ಪಡೆದಷ್ಟು ಎಂಬುದು ನಿಶ್ಚಯ।
ಕಟ್ಟಕಡೆಗೆ ಶ್ರೇಷ್ಠ ಸ್ಪರ್ಧಿಗಳ್ ಗೆದ್ದು ಹೊಡೆದರು ಭೇರಿಯ॥

ಓಂ ಶಾಂತಿ

'ಪಿಳ್ಳಂಗೋವಿ'

ಸಾಯಂಕಾಲವಾದರೆ ಷಹರಿನಲ್ಲೆಲ್ಲಾ, ಬೀದಿ ಬೀದಿಗಳಲ್ಲೆಲ್ಲಾ, ಪಿಳ್ಳಂಗೋವಿಯ ನಾದ. ಮುರಲೀಗಾನ. ತುರ್ಕಿಯ ಟೋಪಿ, ಇಟಲಿಯ ಮಿಸೆ. ಬೈರಾಗಿಗಳ ವಿವಿಧ ಕರೋಬಾ ಮಣಿಗಳ ಮಾಲೆ, ಖಾಂದ್ಹಾರಿನ ಷರಾಯಿ, ಆಂಗ್ಲೇಯರ ಬೂಡ್ಸು ಈ ರೀತಿ ಸಕಲ ದೇಶಗಳ ಸಾರಾಂಶದ ಉಡುಪನ್ನು ಧರಿಸಿ, ಮುರಲೀ ಮಾಲೆಯನ್ನು ಕೈಲಿ ಹಿಡಿದುಕೊಂಡು, ಒಂದು ಪಿಳ್ಳಂಗೊವಿಯನ್ನು ಊದುತ್ತಾ ರಸ್ತೆಯಲ್ಲಿ ನಡೆದ ವ್ಯಕ್ತಿಯು ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತ. ಒಂದೊಂದು ಪಿಳ್ಳಂಗೋವಿಗೂ ಒಂದೊಂದಾಣೆ ಇಷ್ಟು ಸುಲಭವಾಗಿ ದೊರಕುವ ಪಿಳ್ಳಂಗೋವಿಯು, ಬರೀ ಪಿಳ್ಳೆಗಳಿಗೆ ಮಾತ್ರ ಎಂದಲ್ಲ, ದೊಡ್ಡವರಿಗೂ ಕೂಡ ಕೊಂಡುಕೊಂಡು ಒಂದು ಬಾರಿ ಬಾರಿಸಿಯೇ ಬಿಡೋಣ ಎಂದು ಹಂಬಲ ಹುಟ್ಟುವುದು. ಹಾಗಾಗಿಯೇ ನಾನು ಹುಡುಗರ ನೆಪದಲ್ಲಿ ಪಿಳ್ಳಂಗೋವಿ ಮಾರುವವನನ್ನು ಮನೆಗೆ ಕರೆದು ಒಂದು ಪಿಳ್ಳಂಗೋಪಿ ಕೊಂಡುಕೊಂಡೆ, ಮಕ್ಕಳಿಗಾಗಿ ಎಂದು ಇನ್ನೊಂದನ್ನೂ ನಂತರ ಕೊಂಡೆ.

ಮುರಲೀ ಗಾಯಕನು ನನಗೆ ಅದನ್ನು ಊದುವ ವಿಧಾನವನ್ನು ಹೇಳಿಕೊಟ್ಟ. ಬಾಯಲ್ಲಿ ಇಟ್ಟುಕೊಂಡು ಎರಡೂ ಕೈಬೆರಳುಗಳನ್ನು ನಾದ ಬಿಂದುಗಳ ಮೇಲೆ ಇಡುವುದು. ಒಂದು ಬೆರಳನ್ನು ಎತ್ತಿದರೆ ಊದಿದಾಗ, ಷಡ್ಜ, ಇನ್ನೊಂದನ್ನೆತ್ತಿದ್ದರೆ ತೀವ್ರಗಾಮಿ, ದೊಡ್ಡ ಬಿಂದುವನ್ನು ಬಿಡುಮಾಡಿದರೆ ಹ್ರ-ಸ್ವ ಇತ್ಯಾದಿಯಾಗಿ ಪಾಠ ಹೇಳಿದ. ತಾನೂ 'ಚಲಚಲ್ಲೆ ನವ್ ಜವಾನ್' 'ಮೇರೆ ಮೌಲಾ ಬುಲಾಲಮದೀನ ಮುಜೇ' ಹಾಡುಗಳನ್ನು ಬಾರಿಸಿದ. ಬ್ಯಾಂಡು ಬಾರಿಸುವ ವಿಧಾನವನ್ನು ತೋರಿಸಿಕೊಟ್ಟ. ಅವನೆದುರಿಗೇ ಬಾರಿಸಲು ನನಗೆ ಸ್ವಲ್ಪ ಸಂಕೋಚವಾಯಿತು. ಅಂತೇ ಅವನನ್ನು ಬೀಳ್ಕೊಟ್ಟೆ.

ಅವನು ಹೋದ ಕೂಡಲೇ ನನ್ನ ಕೊಠಡಿಗೆ ಹೋಗಿ ಗಾನಾಭ್ಯಾಸಕ್ಕೆ ಶುರುಮಾಡಿದೆ. ಎಡಕಿರುಬೆರಳನ್ನೆತ್ತಿ ಊದಿದೆ ಷಡ್ಜ ಬಲಕಿರುಬೆರಳನ್ನೆತ್ತಿದ್ದೆ—ಷಡ್ಜ—ಉಗುಳು ಹೆಚ್ಚಾಗಿ ಮುರಲಿಯ ಮೂತಿಯೆಲ್ಲಾ ಕೊಯ್ದು ಹೋಗಿ ನವಾಣಿ ಶರೀರವಾಯ್ತು ಮುರಲೀ— ತಿರುಗಿ ಎಲ್ಲವನ್ನೂ ವರಸಿ, ಆರಂಭಿಸಿದೆ. ಯಾವ ಹಾಡನ್ನು ಬಾರಿಸಹೋದರೂ ಒಂದೇ ಗಾನಪ್ರಲಾಪ ಕೇಳಬರುವಂತಾಯ್ತು. ತಲೆಯನ್ನೆಲ್ಲಾ ಊಗಾಡಿಸಿದರೆ, ಗಾನಾಂಕುರವಾಗುತ್ತಿದೇ ಎಂದು ಸಿನಿಮಾದಲ್ಲಿ ಮಾಡುವಂತೆ' ಹಾವಾಡಿಗನು ತೂಗುವಂತೆ, ತಲೆದೂಗಿದೆ. ಏನೂ ಪ್ರಯೋಜನಕಾರಿಯಾಗಲಿಲ್ಲ. ನಿಂತುಕೊಂಡು ಬಾರಿಸಿದರೆ ಸರಿಹೋಗಬಹು

ದೆಂದು ನಿಂತು ಬಾರಿಸಿದೆ. ಸಾರ್ಥಕವಾಗಲಿಲ್ಲ.

ಜಗನ್ನಾಥ ದಾಸರ ಹಿತೋಕ್ತಿಯನ್ನು ಗಮನಿಸಿ.

ಮಲಗಿ ಪಾಡಲು ನಿಂತು ನೋಡಿದೆ.
ನಿಂತು ಪಾಡಲು ಕುಳಿತು ನೋಡಿದೆ
ಕುಳಿತು ಪಾಡಲು ನಡೆದು ನೋಡಿದೆ
ನಡೆದು ಪಾಡಲು ಓಡಿ ಓಡಿದೆ

ಏನೇನಾದರೂ ಗಾನಬರಲೊಲ್ಲದು. ಆ ಖರೋಬಾಮಣಿ ವಿಶ್ವವ್ಯಾಪಿ ಸಾಬಮಾತ್ರ ಈ ಒಂದಾಣೆ ಮುರಲಿಯಿಂದಲೇ ಗಾನವನ್ನು ಸೂಡುತ್ತಾನೆ. ನಾನು ಬಾಯಿ ಬಾಯಿ ಬಿಟ್ಟು, ತುಟಿತಡವರಿಸಿಕೊಂಡು ಊದಿದರೆ ಸಾರ್ಥಕ ಇಲ್ಲವಲ್ಲ ಎಂದು ಕೊರಗುತ್ತಿದ್ದೆ.

ಆ ವೇಳೆಗೆ ಹಾದಿಯಲ್ಲಿ ಯಾರೊ ಪಿಳ್ಳಂಗೋವಿ ಊದಿದಂತೆ ಕೇಳಿಸಿತು, ಕಿಟಕಿಯಲ್ಲಿ ನೋಡಿದೆ ಆ ಸಾಬನೇ ಹಿಂತಿರುಗಿ ಬರುತ್ತಿದ್ದ. ಅವನ ಬಾಯಲ್ಲಿದ್ದ ಪಿಳ್ಳಂಗೋವಿಯು ಚೆನ್ನಾಗಿಯೇ ಗಾನಕೊಡುತ್ತಿತ್ತು. ನನಗೆ ಮೋಸಮಾಡಿ ಕೆಟ್ಟ ಪಿಳ್ಳಂಗೋವಿ ಕೊಟ್ಟಿದ್ದಾನೆ ಅವನು ಬಾರಿಸುತ್ತಿರುವ ಪಿಳ್ಳಂಗೋವಿಯನ್ನೇ ಕೊಂಡುಕೊಂಡರೆ ಗಾನ ಸಾರ್ಥಕವಾದೀತು ಎಂದು ಕೊಂಡು ಹೊರಗೆ ಹೋಗಿ ಆತನನ್ನೂ ಒಳಕ್ಕೆ ಕರೆದು ಅವನು ಬಾರಿಸುತ್ತಿದ್ದದನ್ನು ಕೊಂಡು ಬಂದೆ.

* * *

ಸರಿ, ಶುರು ಕೊರಡಿಯಲ್ಲಿ. ಈ ಸಾರಿ ಕಷ್ಟಪಡುತ್ತಿದ್ದಾಗ, ಒಮ್ಮೆಲೇ ಎ. ಆರ್. ಪಿ. ಅಭ್ಯಾಸದ ಶಿಲ್ಲು ಕೂಗಿತು ಆದರ ಮುಂದೆ ನಂದೇನು ಎಂದು ಸುಮ್ಮನಾಗಿ ಓದ ಗುಳಿತೆ.

ಹತ್ತಿ ಬೆಣ್ಣೆ ಕಾಗದಗಳು

ಚಿರಂಜೀವಿ ಚಿನ್ನಸ್ವಾಮಿಯು ಶಾಲೆಯ ವರದಿಯನ್ನೋದಿದ ಸುಪ್ರಸಿದ್ಧ ಕಾದಂಬರಿ ಕಾರನಾದ ಶ್ರೀಯುತ ಬಳಗದೇವ ಉಜ್ವಲಿಗಿ ಅವರು ತಮ್ಮ ಚಿರಂಜೀವಿ ಚಿನ್ನಸ್ವಾಮಿಗೆ ಬರೆದ ಕಾಗದ.

ಚಿರಂಜೀವಿಗೆ ಆಶೀರ್ವಾದಗಳು,

ನಿನ್ನ ಶಾಲೆಯ ವರದಿಯು ಇಂದು ನನ್ನ ಕೈಸೇರಿತು. ವ್ಯಾಕರಣ ಚರಿತ್ರೆ ಭೂಗೋಳಗಳಲ್ಲಿ ನಿನಗೆ ಕೇವಲ ಅಲ್ಪವಾದ ನಂಬರು ದೊರಕಿದೆ. ಜೀವನ ಸಾಮಾನ್ಯದಲ್ಲಿ ಹೀಗಾದವರಿಗೆ ಲೆಕ್ಕ ರಸಾಯನ, ಭೌತಿಕ ಶಾಸ್ತ್ರಗಳಲ್ಲಿ ಪ್ರೌಢಿಮೆಯಿರುತ್ತದೆ. ಆದರೂ ನಿನ್ನ ವರದಿಯಲ್ಲಿ ಹಾಗೆ ಆಗಿದೆಯೆಂದು ಕಾಣಬರುವುದಿಲ್ಲ. ಕನ್ನಡ ಭಾಷೆಯೊಂದರಲ್ಲಿ ಮಾತ್ರ "ತಕ್ಕಮಟ್ಟಿಗೆ' ಎಂಬ ಟೀಕೆಯು ಗುರುತಾಗಿದೆ. ಮಿಕ್ಕುಳಿದ ವಿಷಯಗಳಲ್ಲೆಲ್ಲಾ ವ್ಯಾಕರಣ ಮಾಸ್ತರ "ಕಷ್ಟಪಟ್ಟರೆ ಇನ್ನೂ ಚೆನ್ನಾಗಿ ಬರೆಯಬಹುದು" ಟೀಕೆಯು, ಒಪ್ಪುವಂತೆ ಕಾಣುತ್ತದೆ. ಹೀಗೆ ಟೀಕೆಗಳು ಬಂದರೆ ಮುಂದೆ ನಿನ್ನ ಜೀವನಕ್ಕೆ ಕಷ್ಟವಾಗಬಹುದು. ನಿನ್ನ ಏಳಿಗೆಗೆ ಕುಂದು ಬರಬಹುದು.

ಇಷ್ಟೇ ಅಲ್ಲದೆ, ನಿನ್ನ ತರಗತಿಯಲ್ಲೇ ಇರುವ ಶಾಮುವಿನ ತಂದೆ ಭೀಮರಾಯನು ತನ್ನ ಮಗನಿಗೆ ತರಗತಿಯ ಪ್ರಶ್ನೆಗಳೆಲ್ಲಾ ದೊರಕಿತೆಂದೂ ನೀನು ಹೇಗೆ ಮುಂದುವರಿಯುತ್ತಿದ್ದೀ ಎಂದು ನನ್ನನ್ನು ಕೇಳಿದಾಗ, ಆ ವಿಷಯವನ್ನು ಭಂಗುಗೊಳಿಸಿ, ಬೇರೆ ವಿಷಯ ಪ್ರಸ್ತಾಪಿಸಬೇಕಾದಾಗ ಸ್ವಲ್ಪ ಕಷ್ಟವೂ, ಕೆಸ್ಸಿಂಥಮನವೂ ಉಂಟಾಯಿತು. ಇದನ್ನು ನೀನು ನಿವಾರಿಸಲು ಯತ್ನಿಸು.

ಈ ತಿಂಗಳಿನ ಹಣವನ್ನು ನಿನ್ನ ಖರ್ಚಿಗೋಸ್ಕರ ಈ ಕಾಗದದೊಂದಿಗ ಕಳುಹಿಸಿದ್ದೇನೆ. ಸುರಕ್ಷಿತವಾಗಿ ತಲಪಿದ್ದಕ್ಕೆ ಉತ್ತರವನ್ನು ಬರೆಯುವುದು.

ನಿನ್ನ ಪ್ರೀತಿ ಪಾತ್ರ,
ಪಿತ

ಚಿನ್ನಸ್ವಾಮಿಯು ತನ್ನ ತಂದೆಗೆ ಬರೆದ ಮಾರುತ್ತರ.

ಪ್ರಿಯ ತೀರ್ಥ ರೂಪರಿಗೆ ಬಾಲಕನ ಸಾಷ್ಟಾಂಗ ನಮಸ್ಕಾರಗಳು. ನೀವು ಬರೆದ ಪತ್ರ ಬಂದು ಸಕಲವೂ ಮನಸ್ಸಿಗಂಟಿತು. ತಾವು ಹೊಸದಾಗಿ ಪ್ರಚುರಪಡಿಸಿದ ಕಾದಂಬರಿಯನ್ನು ಓದಿದೆ. ಅದರ ಮೇಲಿನ ವಿಮರ್ಶೆಗಳೂ ಕಣ್ಣಿಗೆ ಬಿದ್ದುವು. ಪ್ರಜಾವಾಣಿಯ ವಿಮರ್ಶಕಾರನು ಹೇಳಿದಂತೆ ಕಾದಂಬರಿಯನ್ನು ಶೈಲಿ ವ್ಯಾಕರಣಗಳಲ್ಲಿ ಕುಂದಿಲ್ಲದಂತೆ ಇನ್ನೂ ಎಷ್ಟೋ ಚೆನ್ನಾಗಿ, ಬರೆಯಬಹುದಾಗಿತ್ತು. ದೇಶನಾಡು ಪತ್ರಿಕೆಯವರಿಂದ 'ಪ್ರಸಿದ್ಧ ಲೇಖನಕಾರರು ತಮ್ಮ

ಔನ್ನತ್ಯದಿಂದ ಬಹಳ ಮಟ್ಟಿಗೆ ಕೆಳಗಿಳಿದಿದ್ದಾರೆ. ಹೀಗೆಯೇ ಮುಂದೆಯೂ ಕಾದಂಬರಿಗಳನ್ನು ಬರೆದರೆ, ಸಮಾಜಕ್ಕೆ ಅಪರಾಧ ಮಾಡಿದಂತೆ' ಟೀಕೆಯು ಬಹುಶಃ ಎಲ್ಲ ಪತ್ರಿಕೆಗಳವರ ಅಭಿಪ್ರಾಯವೆಂದೇ ಕಾಣುತ್ತದೆ.

ಇದೂ ಅಲ್ಲದೆ ಶಿಷ್ಟ ಶ್ರೀಕಂಠಾಚಾರ್ಯರ ಮಗ ಭೀಮುವು ತನ್ನ ತಂದೆಯು ಹೊಸ ಪುಸ್ತಕವು ಈಗಾಗಲೇ ಹನ್ನೆರಡುಬಾರಿ ಪುನರ್ಮುದ್ರಿತವಾಯ್ತೆಂದೂ ನಿಮ್ಮ ಪುಸ್ತಕವು ಹೇಗೆ ನಡೆಯುತ್ತಿದೆಯೆಂದೂ ನನ್ನನ್ನು ಕೇಳಿದಾಗ, ಅವನ ಮಂಡಿಯ ಮೇಲೆ ಕೈಮಾಡಿ ಮಾತನ್ನು ಮರೆಸುವುದು ಅಷ್ಟಾಗಿ ಸುಲಭವಾಗಲಿಲ್ಲ, 'ಇನ್ನು ಮುಂದಾದರೂ ನನ್ನನ್ನೂ ಈ ಕಳಂಕಕ್ಕೆ ಗುರಿಯಾಗದಂತೆ ತಾವು ಮಾಡುವಿರೆಂದು ನನಗೆ ಭರವಸೆ.

ಲೋಪವಿಲ್ಲದಂತೆ ನನಗೆ ತಾವು ಕಳುಹಿಸಿದ ಮೊಬಲಗು ತಲಪಿತು. ಪುಸ್ತಕಾದಾಯವಾದರೂ ಅಂತೇ ನಿಮಗೆ ಲೋಪವಿಲ್ಲದೆ ದೊರೆಯಿತೆಂದು ನಂಬುವ.

ನಿಮ್ಮ ಪ್ರೇಮ ಪಾತ್ರ.

ಪುತ್ರ.

'ದೃಷ್ಟಿ ತೆಗೆಯುವುದು'

[ನಿಮಗೆ ತೋಚಿದ ದೃಶ್ಯದ ವಿಷಯ ಹಾಸ್ಯಪ್ರಧಾನ ಲೇಖನವನ್ನು ಬರೆಯಿರಿ ಎಂಬ ಕೇಳಿಕೆಗೆ ಉತ್ತರವಾಗಿ ಬಂದುದು ಈ ಲೇಖನ. ಸಂ]

ಕೆಲವು ರಾತ್ರಿಗಳ ಹಿಂದೆ ಪತ್ತೇದಾರಿ ಕತೆಯೊಂದನ್ನು ಓದುತ್ತಿದ್ದಾಗ ರಸ್ತೆಯಲ್ಲಿ ವಾದ್ಯದ ಗಲಾಟೆ, ಸಾಲ್ದೀಪದ ಝಳ ಝಳ, ಕೇಳಿ ಕಾಣ ಬಂತು. ಇದೇನು ಇಷ್ಟು ಗಲಾಟೆ ಎಂದು ಹೊರಗೆ ಹೋಗಿ ವರಾಂಡಾದಲ್ಲಿ ನೋಡ ನಿಂತೆ. ಯಾವುದೊ ಒಂದು ಮದುವೆಯ ಮೆರವಣಿಗೆಯೆಂದು ಕಂಡಿತು.

ಮೊದಲಲ್ಲೇ ಸಾಕ್ಷಾತ್ ರುದ್ರನಂತಿದ್ದ ಶಾಮುಕಾಯನೊಬ್ಬನು ತನ್ನ ಅನುಯಾಯಿಗಳೊಂದಿಗೆ ಓಲಗ ಬಾರಿಸುತ್ತಿದ್ದನು. ರಾಗಟೆಯಂತೆ ತಲೆಯಲ್ಲಿ ಕೂದಲಿನ ಗಂಟು. ಮಿಕ್ಕ ತಲೆಯೆಲ್ಲಾ ಲಿಂಗದಂತೆ ನುಣುಪಾಗಿ ಹೊಳೆಯುತ್ತಿತ್ತು. ಹಣೆಯ ತುಂಬ ಪಟ್ಟೆಪಟ್ಟೆ ವಿಭೂತಿ. ಕತ್ತಿನಲ್ಲೊಂದು ಚಿನ್ನದ ಕಟ್ಟಿನ ರುದ್ರಾಕ್ಷಿ ಹಾರ. ಗಂಟಲ ಗೋವಮಾಳೆಯ ಕೆಳಗೆ ಈ ರುದ್ರಾಕ್ಷಿಯು, ಜ್ವರವನ್ನು ಸೂಚಿಸುವ ಥರ್ಮಾಮೀಟರಿನಂತೆ ಗಾನದ ಏರಿಳಿತಗಳನ್ನೂ ತೋರಿಸುತ್ತಿತ್ತು. ಬಿಳಿ ಷರಟು, ಸೊಂಟಕ್ಕೆ ಕೆಂಪಾನೆ ಮುಗುಟ ಬಿಗಿದು ಕಟ್ಟಿದ್ದಾನೆ. ಸರಿಗೆ ಪಂಚೆ, ಪಂಚಕಚ್ಚೆ ಕಟ್ಟಿದ್ದಾನೆ. ಕೈಯಲ್ಲಿ ಬಾಯಲ್ಲಿ ಓಲಗ-ನಾದಸ್ವರ-ಪೀಪಿಯ ಈ ತುದಿಯಿಂದ ಆ ತುದಿಯತನಕ ಬಿಲ್ಲು ಕಟ್ಟಿದಂತೆ ಮೆಡಲುಗಳ ಮಾಲೆ. ಇವನ ಎಡಪಕ್ಕಕ್ಕೆ ಡಮರುಗವನ್ನೂ ಹಿಡಿದವನಂತೆ ತಬಲ ಹಿಡಿದು ನಿಂತಿರುವ ಸಹಾಯಕ. ಸಹಕಾರಕ್ಕಾಗಿ ಇನ್ನೊಬ್ಬ ಪೀಪಿಯವ. ಅವನ ಪೀಪಿಗೆ ಬಿಲ್ಲಿನಂತೆ ಅಲಂಕಾರವಿಲ್ಲ. ಕತ್ತಿನಲ್ಲಿ ರುದ್ರಾಕ್ಷಿ ಇಲ್ಲ. ಹಿಮ್ಮೇಳದವನೊಬ್ಬ. ಇವರ ಸೊಬಗೇ ಸೊಬಗು. ಇವರು ಹಾಡು ಬಾರಿಸುತ್ತಾ ನಿಂತಲ್ಲಿ ಮೆರವಣಿಗೆಯೂ ನಿಲ್ಲುವುದು. ಇವರು ಕೋರಿದಾಗ ಮುಂದುವರಿದರೆ ಮೆರವಣಿಗೆಯೂ ಸಾಗುವುದು. ಹೀಗೆ ಸಾಕ್ಷಾತ್ ರುದ್ರಾವತಾರಿಗಳಂತೆ ಇವರುಗಳು, ಕೈಲಾಸ ಸೊಬಗನ್ನು ಸೂಸುತ್ತಿದ್ದರು.

ಹಾಗೆಯೇ ಹಿಂತಿರುಗಿ ನೋಡಿದೆ. ಒಂದು ವಿಕ್ಟೋರಿಯಾ ಗಾಡಿ. ಅಂದ ಚೆಂದದ ಉಡುಪನ್ನೂ ಧರಿಸಿದ ಗಾಡಿ ಹೊಡೆಯುವವ. ಗಾಡಿಯೊಳಗೆ ಮೂವರು ಅಪರಿಚಿತರು ಒಬ್ಬ ಗಂಡು, ಒಂದು ಹೆಣ್ಣು, ಒಂದು ಮಗು, ಕುಳಿತಿದ್ದರು. ನನಗೆ ಅನುಮಾನ ಇಷ್ಟು ಚಿಕ್ಕ ಗಂಡು ಹೆಣ್ಣಿಗೆ ಇಷ್ಟು ದೊಡ್ಡ ಮಗುವೇ ಎಂದು? ಇರಬೇಕು ಏನೋ ಮೋಸ ಇದರಲ್ಲಿ ಎಂದುಕೊಂಡೆ. ಹುಡುಗನ ಹುಡುಗಿಯ ಮುಖವನ್ನು ನೋಡಿದೆ. ಗಾಡಿ ಹೊಡೆಯುವವನನ್ನು ನೋಡಿದೆ ಮೂವರ ಮೊಗದಲ್ಲೂ ಒಂದೇ ಕಾಂತಿ ಹೀನತೆ-ಒಂದೇ ಬೇಸರ, ಒಂದೇ ಸೊಂಟನೋವು. ಅಯ್ಯೋ! ಇವರೆಲ್ಲರಿಗೂ ಏನು ಸಂಬಂಧ ಒಟ್ಟಿಗೇ ಹೀಗೆ ಸೊಂಟನೋಯಿಸಿ

ಕೊಳ್ಳುತ್ತಾರಲ್ಲಾ ಎಂದುಕೊಂಡೆ. ಗಾಡಿಯ ಪಕ್ಕದಲ್ಲೂ ಹಿಂದುಗಡೆಯೂ ಹಲವಾರು ಜನರು ಹೆಂಗಸರು ಗಂಡಸರು ನಡೆದು ಬರುತ್ತಿದ್ದರು. ಎಂದೂ ಕಾಣದ ಸೀರೆಗಳು, ಹೂವಿನ ಸೀರೆಗಳು, ಜರತಾರಿ ಸೀರೆಗಳು, ಭಾರದ ಸೀರೆಗಳು, ಉಟ್ಟ ಕೂಡಲೇ ಎತ್ತರ ಕುಗ್ಗುವಂತೆ ಮಾಡುವ ಸೀರೆಗಳು, ಹೀಗೆ ವಿವಿಧ ಸೀರೆಗಳ ಪ್ರದರ್ಶನ. ಆದರೆ ಅನೇ ತರನಾದ ಪಂಚೆ ಅಂಗಿಗಳ ಪ್ರದರ್ಶನವಿಲ್ಲ.


ಹಾಗೆಯೇ ಪ್ರೇಕ್ಷಕರನ್ನೂ ನೋಡಿದೆ. ಎಲ್ಲರ ಕಣ್ಣು ಓಲಗ ಬಾರಿಸುತ್ತಿದ್ದ ಚೌರದವನ ಮೇಲೆ, ಅವನ ಹಾವಭಾವ ಗಾನಗಳ ಮೇಲೆ, ಕುಣಿವ ರುದ್ರಾಕ್ಷಿ ಮೇಲೆ, ಯಾವೊಬ್ಬ ಪ್ರೇಕ್ಷಕನಾದರೂ ಆ ಬಡ ಮದುಮಕ್ಕಳನ್ನು ನೋಡುತ್ತಿರಲಿಲ್ಲ. ಯಾವ ಮನೆಯ ವರಾಂಡಾದಲ್ಲಿನ ಜನರೂ ಚೌರದವನ ಮೇಲೆ ದೃಷ್ಟಿ ಹಾಕಿದ್ದರು. ಕಿಟಕಿಯಿಂದ ನೋಡುತ್ತಿದ್ದವರೂ ಓಲಗದವನ ಮೇಲೆಯೇ ನೋಟ. ಒಂದು ನರ ಪಿಳ್ಳೆಯಾದರೂ ಗಾಡಿಯ ಕಡೆ ನೋಡಲೊಲ್ಲರು.

ಹೀಗಿದ್ದಾಗ್ಯೂ ಮನೆ ತಿರುಗಿ ಸೇರಿದ ಕೂಡಲೇ ಮದುಮಕ್ಕಳಿಗೆ ದೃಷ್ಟಿ ತೆಗೆಯಲು ಇಡಿಗಾಯಿ ಹಾಕಿ, ಆರತಿ ತೆಗೆಯುತ್ತಾರೇ ವಿನಹಾ, ದೃಷ್ಟಿಹಾಕಬಹುದಾದ ಓಲಗದವನಿಗೆ ಯಾರೂ ಏಕೆ ದೃಷ್ಟಿ ತೆಗೆಯುವುದಿಲ್ಲ? ಎನ್ನಿಸಿತು.



ರಾಯರು— ನೋಡಿ ಮೇಷ್ಟ್ರೇ ನಮ್ಮ ಹುಡುಗ ಎಷ್ಟು ಬುದ್ಧಿ ಎನ್ನುತ್ತೀರಿ–ಆ ವಯಸ್ಸಿಗೆ—

ಮೇಷ್ಟ್ರು— ಹೌದು, ರಾಯರೇ, ದೇವರ ಅಪಾರ ಕರುಣೆ ಒಂದು ನಿದರ್ಶನ ನೋಡಿ— ಬೆಪ್ಪು ಪೆಚ್ಚು ಹುಡುಗರೆಲ್ಲಾ ಅನಾಥರಾಗಿಯೇ ಇರುತ್ತಾರೆ.



ಲೋಧ್ರ — ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿ ಮಾಡುವುದು.

ಅರ್ಕ — ಶ್ರೇಷ್ಠ ಜ್ವರ ನಿವಾರಿಣಿ

ಇನ್ಫ್ಲೂಯಂಜಾ ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ — ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿ ಮಾಂದ್ಯ, ತಲೆ ತಿರುಗುವುದು, ಚರ್ಮರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :


ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಿರೀಕ್ಷಿಸಿರಿ ! **ನಿರೀಕ್ಷಿಸಿರಿ !!**

ಬೆಂಗಳೂರು **ಸಾಗರ್ ಟಾಕೀಸ್‌ನಲ್ಲಿ**

ಶ್ರೀ ರಾಜರಾಜೇಶ್ವರಿ ಪಿಕ್ಚರ್ಸ್‌ರವರ



ಸುಮತಿ (ತೆಲುಗು)

ತಾರಾಗಣ :

ಸಿ. ಯಸ್. ಆರ್. ಆಂಜನೇಯುಲು, ಕನ್ನಾಂಬ, ಆರಣಿ ಮುಂತಾದವರು

ಡೈರೆಕ್ಟರ್:— ಕೆ. ನಾಗಭೂಷಣಂ; ಸ್ಟುಡಿಯೋ:— ಜಮಿನಿ.

For Bookings:

SARASWATHI TALKIES LTD., Bezwada, Bangalore City.